ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ನಂತರ ಜಮ್ಮು-ಕಾಶ್ಮೀರ ಮತ್ತು ಲಡಾಖ್ ಚಿತ್ರಣವೇ ಬದಲಾಗಿದೆ. ಅಲ್ಲಿನ ಜನರಿಗೆ ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಲು ಸಾಲು ಹೊಸ ಅವಕಾಶಗಳು ಸಿಗುತ್ತಿವೆಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಹೇಳಿದ್ದಾರೆ.


06 ಆಗಸ್ಟ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -146 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಸ್ವಾತಂತ್ರ್ಯದ ಶಾಶ್ವತ ಧ್ವನಿ ವಂದೇ ಮಾತರಂ » 2


ಯೋಗ, ಧ್ಯಾನದಿಂದ ಆರೋಗ್ಯ ವೃದ್ಧಿ » 3


ಬಿಡದಿ ಟೌನ್‌ಶಿಪ್ ವಿರೋಧಿಸಿ ಪಾದಯಾತ್ರೆ » 4


# ಜಿಲ್ಲೆಯಲ್ಲಿ ಆಘಾತಕಾರಿ ಬರದ ಛಾಯೆ

- ಎನ್‌ಡಿಆರ್‌ಎಫ್ ಮಾರ್ಗಸೂಚಿ ಅನ್ವಯ ವರದಿ ಸಿದ್ಧಪಡಿಸಿ ರೈತರಿಗೆ ಪರಿಹಾರ
- ಬರ ಅಧ್ಯಯನ ನಡೆಸಿ ಕೆ.ಎಂ.ಶಿವಲಿಂಗೇಗೌಡ ಭರವಸೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಬರದ ಛಾಯೆ ಆವರಿಸಿರುವ ಹಿನ್ನಲೆ ಎಲ್ಲೆಡೆ ಸಮೀಕ್ಷೆ ನಡೆಸಿ, ಎನ್‌ಡಿಆರ್‌ಎಫ್ ಮಾರ್ಗ ಸೂಚಿ ಪ್ರಕಾರ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿ, ರೈತರಿಗೆ ಅಗತ್ಯ ಪರಿಹಾರ ಕೊಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ಚನ್ನರಾಯಪಟ್ಟಣ, ಹೊಳೆನರಸೀಪುರ ತಾಲ್ಲೂಕಿನಲ್ಲಿ ಬುಧವಾರ ಬರ ಪರಿಸ್ಥಿತಿ ಅಧ್ಯಯನ ನಡೆಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಅಘಾತಕಾರಿ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿದ್ದು, ಮೊದಲ ಸಚಿವ ಸಂಪುಟ ಸಭೆಯಲ್ಲೇ ಬರ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ. ಅದರಂತೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಜಿಲ್ಲೆಯ ಒಂದೆಡೆ ಮಳೆ ಬಾರದೆ ಬಿತ್ತನೆ ಮಾಡಲು ರೈತರಿಗೆ ಸಾಧ್ಯವೇ ಆಗಿಲ್ಲ, ಮತ್ತೊಂದು ಕಡೆ ಬಿತ್ತನೆ ಮಾಡಿದ್ದರೂ ಮಳೆ ಬಾರದೆ ಬೆಳೆ ನಾಶವಾಗಿದೆ. ಇದರ ಜೊತೆಗೆ ಮೆಕ್ಕೆಜೋಳ ಬೆಳೆಗೆ ಬಿಸಿಸುಳಿ ರೋಗ ಕಾಣಿಸಿಕೊಂಡು ರೈತರು ಸಮಸ್ಯೆಗೆ ಸಿಲುಕಿದ್ದಾರೆ. ಈ ಹಿಂದೆ ಜೋಳದ ಬೆಳೆಯನ್ನು ಪಶುಗಳಿಗೆ ಆಹಾರವಾಗಿ ಬಳಸುವ ಮೂಲಕ ಲಾಭ ಪಡೆಯುತ್ತಿದ್ದರು. ಇಲ್ಲವೇ ಜೋಳ ಮಾರಾಟ ಮಾಡಿ ಬದುಕು ಸಾಗಿಸುತ್ತಿದ್ದರು.

» ನಾಲ್ಕನೇ ಪುಟದಲ್ಲಿ

### ಬಿತ್ತನೆ ಮಾಡದವರಿಗೆ ತಕ್ಷಣ ಪರಿಹಾರ

ಮಳೆ ಕೊರತೆಯಿಂದ ಬಿತ್ತನೆ ಮಾಡಲು ಸಾಧ್ಯವಾಗದೆ ಇರುವ ರೈತರಿಗೆ ಬೆಳೆ ವಿಮೆ ಅನ್ವಯ ಶೇ.25ರಷ್ಟು ಹಣವನ್ನು ರೈತರ ಖಾತೆಗೆ ನೇರವಾಗಿ ಜಮೆ ಮಾಡಲು ಕಾನೂನಿದೆ. ಹೀಗಾಗಿ ಯಾರುವ ಬಿತ್ತನೆ ಮಾಡಲು ಸಾಧ್ಯವಾಗಿಲ್ಲ ಅಂತಹ ರೈತರಿಗೆ ತಕ್ಷಣ ಪರಿಹಾರ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಬೆಳೆ ನಾಶವಾಗಿರುವ ಕಡೆಗಳಲ್ಲಿ ನಿಯಮಗಳ ಪ್ರಕಾರ ಬೆಳೆ ವಿಮೆಯನ್ನು ತಲುಪಿಸುವ ಕೆಲಸ ಮಾಡಲಾಗುವುದೆಂದು ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಭರವಸೆ ನೀಡಿದರು.



### ಹಾರ-ತುರಾಯಿ ಸ್ವಾಗತ ಬೇಡ

ಬರ ಅಧ್ಯಯನದ ವೇಳೆ ಹಾರ-ತುರಾಯಿ ಹಾಕಿಸಿಕೊಂಡು ಸ್ವಾಗತ ಸ್ವೀಕರಿಸುವುದು ಸೂಕ್ತವಲ್ಲ. ಆದರೂ ಕಾರ್ಯಕರ್ತರು ಹಾಗು ಅಭಿಮಾನಿಗಳು ಪ್ರೀತಿಯಿಂದ ಸ್ವಾಗತಿಸಿದ್ದಾರೆ. ಅವರ ಅಭಿಮಾನವನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಹೀಗಾಗಿ ಬರ ಅಧ್ಯಯನ ವೇಳೆ ಹಾರ-ತುರಾಯಿ ಬೇಡವೆಂದು ಕಾರ್ಯಕರ್ತರಲ್ಲಿ ಮಾಡಿದರು.

### ಇಂದು ಮೂರು ಕ್ಷೇತ್ರದಲ್ಲಿ ವೀಕ್ಷಣೆ

ಮೊದಲ ದಿನ ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಕಲಗೂಡು ಕ್ಷೇತ್ರದಲ್ಲಿ ಬರ ಅಧ್ಯಯನ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಗುರುವಾರ ಹಾಸನ, ಬೇಲೂರು, ಆಲೂರು-ಸಕಲೇಶಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಧಿಕಾರಿಗಳೊಂದಿಗೆ ಬರ ಪರಿಸ್ಥಿತಿ ಪರಿಶೀಲನೆ ನಡೆಸಲಿದ್ದಾರೆ.

## ಜಿಲ್ಲೆ ಗಡಿಯಲ್ಲಿ ಕೆ.ಎಂ.ಶಿ.ಗೆ ಅದ್ದೂರಿ ಸ್ವಾಗತ



• ಪ್ರಜೋದಯ ವರದಿ

**ಹಾಸನ:** ಸಚಿವರಾದ ಬಳಿಕ ಮೊದಲ ಬಾರಿಗೆ ಜಿಲ್ಲೆ ಆಗಮಿಸಿದ ಕೆ.ಎಂ.ಶಿವಲಿಂಗೇಗೌಡ ಅವರನ್ನು ಜಿಲ್ಲೆಯ ಗಡಿಭಾಗ ಕಿರಿಸಾವೆಯಲ್ಲಿ ಪಟಾಕಿ ಸಿಡಿಸಿ, ಕಾಂಗ್ರೆಸ್ ಮುಖಂಡರು ಹಾಗು ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು.

ಸಂಸದ ಶ್ರೇಯಸ್ ಪಟೇಲ್, ಜೆಡಿಎಸ್ ಶಾಸಕ ಸಿ.ಎನ್.ಬಾಲಕೃಷ್ಣ, ಮಾಜಿ ಶಾಸಕ ಪುಟ್ಟೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಲಕ್ಷ್ಮಣ್, ಮುಖಂಡರಾದ ಹೆಚ್.ಕೆ.ಮಹೇಶ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಅವರು ಹೂಗುಚ್ಛ ನೀಡಿ ಸ್ವಾಗತಿಸಿದರು.

ಸಚಿವರಾಗಿ ಆಗಮಿಸಿದ ಶಿವಲಿಂಗೇಗೌಡ ಅವರನ್ನು ಸನ್ಮಾನಿಸಲು ಕಾರ್ಯಕರ್ತರು, ಬೆಂಬಲಿಗರು ಮುಗಿಬಿದ್ದರಿಂದ ನೂಕು ನುಗ್ಗಲು ಉಂಟಾಯಿತು. ನಂತರ ಕಿರಿಸಾವೆ ಗ್ರಾಮದಲ್ಲಿರುವ ಆಂಜನೇಯಸ್ವಾಮಿಗೆ ಪೂಜೆ ಸಲ್ಲಿಸಿದರು. ಬಳಿಕ ಚನ್ನರಾಯಪಟ್ಟಣ, ಹೊಳೆನರಸೀಪುರ ಹಾಗು ಅರಕಲಗೂಡು ತಾಲ್ಲೂಕುಗಳ ವಿವಿಧ ಗ್ರಾಮಗಳಿಗೆ ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಬರ ಪರಿಸ್ಥಿತಿ ಅಧ್ಯಯನ ನಡೆಸಿದರು.

## ಕೆರೆಕಟ್ಟೆಗಳಿಗೆ ನೀರು ಹರಿಸಲು ಆಗ್ರಹಿಸಿ ಜೆಡಿಎಸ್ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಹೇಮಾವತಿ ಜಲಾಶಯದಿಂದ ಎಡದಂಡೆ ಹಾಗು ಚಂಗರವಳ್ಳಿ ನಾಲಾ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶಗಳ ಕೆರೆ-ಕಟ್ಟೆಗಳ ಭರ್ತಿಗೆ ನೀರು ಹರಿಸಬೇಕೆಂದು ಆಗ್ರಹಿಸಿ ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಜೆಡಿಎಸ್ ಕಾರ್ಯಕರ್ತರು ಬುಧವಾರ ಗೊರೂರು ಹೇಮಾವತಿ ಜಲಾಶಯ ಯೋಜನೆಯ ಮುಖ್ಯ ಇಂಜಿನೀಯರ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಮಾತನಾಡಿ, ಸರ್ಕಾರ ಮತ್ತು ನೀರಾವರಿ ಇಲಾಖೆ ರೈತರ ಸಂಕಷ್ಟವನ್ನು ಗಂಭೀರವಾಗಿ ಪರಿಗಣಿಸಬೇಕು. ಎಡದಂಡೆ ನಾಲೆ ಹಾಗು ಚಂಗರವಳ್ಳಿ ನಾಲಾ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶಗಳಿಗೆ ತಕ್ಷಣ ನೀರು ಹರಿಸಬೇಕು.ಈ ಭಾಗದ ಕೆರೆ-ಕಟ್ಟೆಗಳು ನೀರಿನ ಕೊರತೆಯಿಂದ ಬತ್ತಿದ್ದು, ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗಿದೆ. ಕೃಷಿ ಚಟುವಟಿಕೆಗಳಿಗೂ ಹಿನ್ನಡೆಯಾಗುತ್ತಿರುವ ಹಿನ್ನಲೆಯಲ್ಲಿ ತಕ್ಷಣ ನೀರು ಬಿಡುವ ಮೂಲಕ ರೈತರ ಹಿತ ಕಾಪಾಡಬೇಕೆಂದು ಒತ್ತಾಯಿಸಿದರು.



ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ವಿಳಂಬ ಮಾಡದೆ ನೀರು ಹರಿಸಲು ಸರ್ಕಾರ ಮುಂದಾಗಬೇಕು. ರೈತರ ಹಿತಾಸಕ್ತಿಯನ್ನು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದೆಂದು ಎಚ್ಚರಿಕೆ ನೀಡಿದರು.

ಮನವಿ ಸ್ವೀಕರಿಸಿದ ಹೇಮಾವತಿ ಜಲಾಶಯ ಯೋಜನೆಯ ಮುಖ್ಯ ಇಂಜಿನೀಯರ್, ರೈತರ ಬೇಡಿಕೆಯನ್ನು ಸರ್ಕಾರ ಹಾಗು ಉನ್ನತ ಅಧಿಕಾರಿಗಳ ಗಮನಕ್ಕೆ ತಂದು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಜೆಡಿಎಸ್ ತಾಲ್ಲೂಕು ಎಸ್.ದ್ಯಾವೇಗೌಡ, ಮುಖಂಡ ರುದ್ರಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಜಗದೀಶ್ ರಾಮಘಟ್ಟ, ಹೇಮರಾಜು ಗೊರೂರು, ಉಡುವಾರೆ ಧರಣಿ ಶಿವಶಂಕರ್, ಅಂಕನಹಳ್ಳಿ ಜಯರಾಮ್, ಅಜ್ಜು ಖಾನ್, ಚಂದ್ರಶೇಖರ್ ಮತ್ತಿತರರಿದ್ದರು.

# ಜಿಲ್ಲೆಯಲ್ಲಿ ಹೊಸ ರಾಜಕೀಯ ಪರ್ವ ಶುರು

### ಹೊ.ನ.ಪುರದಲ್ಲಿ ಸಚಿವ ಶಿವಲಿಂಗೇಗೌಡ ಭಾಷಣ

• ಪ್ರಜೋದಯ ವರದಿ

**ಹೊಳೆನರಸೀಪುರ:** ಇಂದಿನಿಂದ ಜಿಲ್ಲೆಯಲ್ಲಿ ಹೊಸ ರಾಜಕೀಯ ಪರ್ವ ಆರಂಭವಾಗಿದೆ. ನಾವೆಲ್ಲಾ ಸೇರಿ ಜಿಲ್ಲೆಯಲ್ಲಿ ಹೊಸ ನಾಯಕತ್ವ ಕಟ್ಟೋಣ, ಎಲ್ಲರೂ ಧೈರ್ಯವಾಗಿರಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ಬುಧವಾರ ಬರ ಅಧ್ಯಯನದ ವೇಳೆ ತಾಲ್ಲೂಕಿಗೆ ಆಗಮಿಸಿದ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಮೊದಲಿಗೆ ಮಹಾತ್ಮಗಾಂಧಿ, ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಮೊದಲ ಬಾರಿಗೆ ಕ್ಷೇತ್ರಕ್ಕೆ ಆಗಮಿಸಿದ ಸಚಿವರಿಗೆ ಸಂಸದ ಶ್ರೇಯಸ್ ಪಟೇಲ್ ಹಾಗು ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು.



ಈ ವೇಳೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಏನೇ ಅಭಿವೃದ್ಧಿ ಇದ್ದರೂ ಮಾಡೋಣ. ಶ್ರೇಯಸ್ ಪಟೇಲ್‌ಗೆ ಅದ್ಭುತ ಬೆಂಬಲ ಕೊಟ್ಟಿದ್ದೀರಿ. ಮುಂದಿನ ದಿನಗಳಲ್ಲಿ ನಮಗೆ ಹಲವು ಸವಾಲುಗಳಿವೆ. ಆ ಸವಾಲನ್ನು ಮೆಟ್ಟಿನಿಂತು ಆಡಳಿತ ಮಾಡಿ ತೋರಿಸಬೇಕಿದೆ. ಇಂದಿನಿಂದ ಹೊಸ ರಾಜಕೀಯ ಪರ್ವ ಶುರುವಾಗಿದೆ. ಬರ ಅಧ್ಯಯನ ನಡೆಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ. ಬೆಳೆ ವಿಮೆ ಕಟ್ಟಿದವರಿಗೆ ಇನ್ನೊಂದು ತಿಂಗಳಲ್ಲಿ ಮನೆ ಬಾಗಿಲಿಗೆ ಪರಿಹಾರ ಚೆಕ್ ಕೊಡುತ್ತೇವೆಂದರು.

ಜಿಲ್ಲೆಯಲ್ಲಿ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಜೋಳದ ಬೆಳೆ ಬಿಳಿ ಸುಳಿ ರೋಗ ಬಂದಿದೆ. ರೈತರ ನೂರಾರು ಕೋಟಿ ಹಣ ನಷ್ಟ ಆಗಿದ್ದು, ಅದನ್ನು ರೈತರಿಗೆ ಕೊಡಿಸುವ ಕೆಲಸ ಮಾಡಬೇಕಿದೆ. ಏನೇ ಅಭಿವೃದ್ಧಿ ಆಗಬೇಕಿದ್ದರೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಮಾತನಾಡಿ, ಸಂಸದ ಶ್ರೇಯಸ್ ಪಟೇಲ್ ಜೊತೆ ಸೇರಿ ಮಾಡೋಣ ಎಂದರು.

ಈ ಜಿಲ್ಲೆಯ ರಾಜಕಾರಣದಲ್ಲಿ ಪುಟ್ಟಸ್ವಾಮಿಗೌಡರು ಹೋರಾಟಗಾರರು. ವಿಧಾನಸಭೆ, ಲೋಕಸಭೆಯಲ್ಲಿ ತಮ್ಮದೇ ಇತಿಹಾಸ ಸೃಷ್ಟಿಸಿದ್ದಾರೆ. ಈಗ ಅವರ ಮೊಮ್ಮಗನನ್ನು ರಾಜಕೀಯ ಕ್ಷೇತ್ರದಲ್ಲಿ ಲೋಕಸಭೆಗೆ ಆಯ್ಕೆಯಾಗಲು ಕೊಡುಗೆ ನೀಡಿದ್ದಾರೆ. ಅವರ ರಾಜಕೀಯವನ್ನು ಯಾರೂ ಅಳಿಸಲು ಸಾಧ್ಯವಿಲ್ಲ. ಪುಟ್ಟಸ್ವಾಮಿಗೌಡರು ಅಭಿವೃದ್ಧಿಯ ನಾಯಕರು. ಅವರ ಕೊಡುಗೆ ಯಾರೂ ಮರೆಯಲು ಸಾಧ್ಯವಿಲ್ಲವೆಂದು ಕೊಂಡಾಡಿದದರು. ಸಂಸದ ಶ್ರೇಯಸ್ ಪಟೇಲ್ ಸೇರಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

### ಬರ ಪರಿಸ್ಥಿತಿ ಅಧ್ಯಯನದ ವೇಳೆ ಅಧಿಕಾರಿಗಳ ಮೇಲೆ ಸಚಿವ ಗರಂ

**ಚನ್ನರಾಯಪಟ್ಟಣ** ಹಳ್ಳಿಗಳ ಕಡೆಗೆ ಕರೆದುಕೊಂಡು ಹೋಗಿ, ರಸ್ತೆ ಪಕ್ಕ ಇರುವ ಜಮೀನುಗಳನ್ನು ಓಡಾಡುವಾಗ ನೋಡಿಕೊಂಡು ಹೋಗುತ್ತೇವೆ. ನೀವು ರಸ್ತೆ ಬದಿ ಯಾವುದನ್ನೂ ತೋರಿಸಬೇಡಿ ಎಂದು ಬರ ಪರಿಸ್ಥಿತಿ ಅಧ್ಯಯನದ ವೇಳೆ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಅಧಿಕಾರಿಗಳ ಮೇಲೆ ಗರಂ ಆದರು.

ಗ್ರಾಮೀಣ ಪ್ರದೇಶದಲ್ಲಿ ಉಂಟಾಗಿರುವ ಬೆಳೆ ಹಾನಿ, ಬಿತ್ತನೆ ಆಗದೆ ಇರುವುದನ್ನು ನೋಡಬೇಕು. ನೀವು ಅದನ್ನು ಬಿಟ್ಟು ರಸ್ತೆ ಬದಿಯ ಜಮೀನಿಗೆ ಕರೆದುಕೊಂಡು ಬಂದರೆ ಹೇಗೆಂದು ಪ್ರಶ್ನಿಸಿದರು.

» ನಾಲ್ಕನೇ ಪುಟದಲ್ಲಿ

## ಸಂಪುಟ ವಿಸ್ತರಣೆ ವೇಳೆ ಅಸಮಾಧಾನ ಸಹಜ: ಕೆ.ಎಂ.ಶಿ.

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಯಾವುದೇ ಮಂತ್ರಿಮಂಡಲ ವಿಸ್ತರಣೆ ಆದಾಗ ಅಸಮಾಧಾನ ಸಹಜ. ಈ ಸಮಸ್ಯೆಯನ್ನು ಹೈ ಕಮಾಂಡ್ ನೋಡಿಕೊಳ್ಳುತ್ತದೆ ಎಂದು ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ಬುಧವಾರ ತಾಲ್ಲೂಕಿನ ಕಿರಿಸಾವೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆ.ಹೆಚ್.ಪಟೇಲ್ ಅವರ ಕಾಲದಲ್ಲಿ 64 ಜನರನ್ನು ಮಂತ್ರಿ ಮಾಡಿದ್ದರು. ಆಗ ಇದ್ದವರೆಲ್ಲಾ ಮಂತ್ರಿಗಳು, ಉಳಿದವರಿಗೆ ನಿಗಮ ಮಂಡಳಿ ಕೊಟ್ಟಿದ್ದರು. ಎಲ್ಲರಿಗೂ ಗೂಟದ ಕಾರು ಸಿಗುತ್ತಿದ್ದವು. ಈಗ 34 ಜನರನ್ನು ಮಾಡಬೇಕೆಂಬ ಕಾನೂನಿದೆ. ಮಹಿಳೆಯರಿಗೆ



ಸಚಿವ ಸ್ಥಾನ ನೀಡುವ ಬಗ್ಗೆ ಪಕ್ಷದ ನಾಯಕರು ತೀರ್ಮಾನ ಮಾಡುತ್ತಾರೆ. ನಾನು 25 ವರ್ಷದಿಂದ ಹಲವು ಸರ್ಕಾರಗಳನ್ನು ನೋಡುತ್ತಿದ್ದೇನೆ. ಬೊಮ್ಮಾಯಿ ಅವರ ಸರ್ಕಾರ ಎಷ್ಟು ದಿನಕ್ಕೆ ಬಿದ್ದು ಹೋಯಿತು ಎಂಬುದು ಗೊತ್ತಿದೆ. ಯಾವಾಗ ಮಂತ್ರಿಮಂಡಲ ರಚನೆ ಮಾಡಿದಾಗ ಗಲಾಟೆ, ಅಸಮಾಧಾನಗಳಾಗಿಲ್ಲವೇ ಎಂದು ಪ್ರಶ್ನಿಸಿದ ಅವರು, ಕಾಂಗ್ರೆಸ್ ಪಕ್ಷ, ಹೈ ಕಮಾಂಡ್ ರಾಹುಲ್‌ಗಾಂಧಿ ನೇತೃತ್ವದಲ್ಲಿ ಈ ದೇಶದಲ್ಲಿ ಬಲಿಷ್ಠವಾಗಿದೆ. ಸಮರ್ಥನೆ ಮಾಡಿಕೊಂಡು ನಿಬಾಯಿಸುವ ಶಕ್ತಿ ಕಾಂಗ್ರೆಸ್ ಪಕ್ಷಕ್ಕಿದೆ ಎಂದರು.

ಪ್ರಮಾಣ ವಚನಕ್ಕೆ ಸಿದ್ದರಾಮಯ್ಯ ಗೈರು ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಅದನ್ನು ನಾನು ಹೋಗಿ ಕೇಳಿದೆ. ಒಂದು ಕಾಲ್ಪನಿಕವಾಗಿ ನಡೆದಂತಹ ಘಟನೆಯಿಂದ ಬರಲು ಆಗಲಿಲ್ಲ. ಪ್ರಮಾಣ ವಚನ ಸ್ವೀಕರಿಸುವುದನ್ನು ಟಿವಿಯಲ್ಲಿ ಕುಳಿತುಕೊಂಡು ನೋಡಿದೆ ಎಂದು ಹೇಳಿದ್ದಾರೆ. ಯಾವುದೇ ಅಸಮಾಧಾನವಿಲ್ಲವೆಂದು ಸಮರ್ಥಿಸಿಕೊಂಡರು.

### ಕೊಟ್ಟ ಮಾತು ಉಳಿಸಿಕೊಂಡಿದ್ದಾರೆ

ನನ್ನನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆದುಕೊಂಡು ಹೋಗುವಾಗ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸುರ್ಜೇವಾಲ ಮಾತು ಕೊಟ್ಟಿದ್ದರು. ಅದನ್ನು ಉಳಿಸಿಕೊಂಡಿದ್ದಾರೆ. ಶೀಘ್ರದಲ್ಲೇ ಖಾತೆ ಹಂಚಿಕೆ ಆಗುತ್ತೆ. ನಾನು ಯಾವ ಖಾತೆಗೂ ಬೇಡಿಕೆ ಇಟ್ಟಿಲ್ಲ. ಯಾವುದು ಕೊಡುತ್ತಾರೋ ಅದನ್ನು ನಿಬಾಯಿಸೋದು. ಆದರೆ, ನಿರೀಕ್ಷೆ ಏನಿಲ್ಲ, ಅದು ಮುಖ್ಯಮಂತ್ರಿ ಪರಮಾಧಿಕಾರವೆಂದು ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

### ಯಗಚಿ ಜಲಾಶಯಕ್ಕೆ ಹೆಚ್ಚಿದ ಒಳಹರಿವು

• ಪ್ರಜೋದಯ ವರದಿ

**ಹಾಸನ:** ಯಗಚಿ ಜಲಾನಯನ ವ್ಯಾಪ್ತಿ ಯಲ್ಲಿ ಮಳೆ ಅಬ್ಬರಿಸುತ್ತಿರುವ ಹಿನ್ನಲೆ ಜಲಾಶಯಕ್ಕೆ ಒಳಹರಿವು ಹೆಚ್ಚಿದೆ. ನದಿ ಪಾತ್ರ, ನದಿ ದಂಡೆ ಮತ್ತು ನದಿಯ ಆಸುಪಾಸಿನಲ್ಲಿ ವಾಸಿಸುವ ಎಲ್ಲಾ ಗ್ರಾಮಸ್ಥರು ಮುನ್ನೆಚ್ಚರಿಕೆ ಕ್ರಮವಾಗಿ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಆಗಬೇಕೆಂದು ಕಾವೇರಿ ನೀರಾವರಿ ನಿಗಮದ ಯಗಚಿ ಯೋಜನಾ ವಿಭಾಗದ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ. ಜಲಾಶಯದ ಗರಿಷ್ಟ ನೀರಿನ ಮಟ್ಟ 964.600 ಮೀ. ಇದ್ದು (31 64.85 ಅಡಿ) 964.170 ಮೀ. (31 63.442ಅಡಿ) ನೀರು ಸಂಗ್ರಹವಾಗಿದೆ.

## ಕಾನೂನುಬದ್ಧ ಗಣಿಗಾರಿಕೆಗೂ ದಂಡದ ಪ್ರಹಾರ: ಆರೋಪ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರ ಹಾಗು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳ ನಡುವಿನ ಹೊಂದಾಣಿಕೆ ಕೊರತೆಯಿಂದ ಅವೈಜ್ಞಾನಿಕ ನಿಯಮಗಳನ್ನು ಜಾರಿಗೊಳಿಸುತ್ತಿದ್ದು, ಕೋಟ್ಯಾಂತರ ರೂಪಾಯಿ ದಂಡ ವಿಧಿಸಲಾಗುತ್ತಿದೆ ಎಂದು ಕ್ವಾರಿ ಮಾಲೀಕರ ಸಂಘದ ರಾಜ್ಯಾಧ್ಯಕ್ಷ ಡಿ.ಸಿದ್ದರಾಜು ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಪ್ರತಿವರ್ಷ ಆಡಿಟ್ ಮಾಡುತ್ತದೆ. ಅದರಂತೆ ದಶಕಗಳಿಂದ ಸರ್ಕಾರಕ್ಕೆ ರಾಜಧನ ಪಾವತಿಸುತ್ತಿದ್ದೇವೆ. ಆದರೆ 2023ರಲ್ಲಿ ಕೆಎಸ್‌ಆರ್‌ಎಸ್‌ಎಸಿ ಏಜೆನ್ಸಿಗೆ ವಹಿಸ



ಲಾಗಿದೆ. ಆ ಏಜೆನ್ಸಿ ಡ್ರೋನ್ ಸರ್ವೆ ಮೂಲಕ ಗಣಿಗಾರಿಕೆ ಜಾಗವನ್ನು ಅಧಿಕ ತೋರಿಸಿ ಹಾಗು ನಿಯಮ ಉಲ್ಲಂಘನೆ ಹೆಸರಿನಡಿ ಕೋಟ್ಯಾಂತರ ರೂಪಾಯಿ ರಾಜಧನ ಹಾಗು ದಂಡ ಕಟ್ಟುವಂತೆ ನೋಟೀಸ್ ನೀಡಿದೆ. ಮೊದಲೇ ನಷ್ಟದಲ್ಲಿರುವ ಸ್ಟೋನ್ ಕ್ರಷರ್ ಮತ್ತು ಕ್ವಾರಿ ಮಾಲೀಕರಿಗೆ ಈ ನಿಯಮ ಹೊರೆಯಾಗಿದೆ. ಗಣಿಗಾರಿಕೆಯನ್ನೇ ಆರಂಭಿಸದ ವ್ಯಕ್ತಿಯೊಬ್ಬರಿಗೆ 56 ಲ.ರೂ. ದಂಡ ವಿಧಿಸಿದ್ದಾರೆಂದು ವಿವರಿಸಿದರು.

ಕ್ರಷರ್ ಮಾಲೀಕರನ್ನು ಕಳ್ಳರಂತೆ ಬಿಂಬಿಸಲಾಗುತ್ತಿದೆ. ಪ್ರತಿ ಹೆಕ್ಟೇರ್‌ಗೆ 5 ಲಕ್ಷ ದಂಡ ವಿಧಿಸಿ ಪ್ರಕರಣ ಇತ್ಯರ್ಥಗೊಳಿಸುವಂತೆ ಮನವಿ ಸಲ್ಲಿಸಿದರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಈ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಇಲಾಖೆಯ ಮಲತಾಯಿ ಧೋರಣೆ ಖಂಡಿಸಿ ಬಳ್ಳಾರಿ ಹಾಗು ಶಿವಮೊಗ್ಗಾ

» ನಾಲ್ಕನೇ ಪುಟದಲ್ಲಿ

## 50 ಲ.ರೂ. ವೆಚ್ಚದ ಕಾಮಗಾರಿಗೆ ಭೂಮಿಪೂಜೆ



• ಪ್ರಜೋದಯ ವರದಿ

**ಹಾಸನ:** ನಗರದ ಬಿ.ಟಿ.ಕೊಪ್ಪಲು, ಕೆಎಸ್‌ಆರ್‌ಟಿಸಿ ಬಡಾವಣೆಯಲ್ಲಿ ಕೈಗೊಂಡಿರುವ 50 ಲ.ರೂ. ವೆಚ್ಚದ ಕಾಮಗಾರಿಗೆ ಶಾಸಕ ಹೆಚ್.ಪಿ. ಸ್ವರೂಪ್ ಅವರು ಬುಧವಾರ ಭೂಮಿಪೂಜೆ ನೆರವೇರಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿ.ಟಿ.ಕೊಪ್ಪಲು ಹಾಗು ಕೆಎಸ್‌ಆರ್‌ಟಿಸಿ ಬಡಾವಣೆಯಲ್ಲಿ ಈಗಾಗಲೇ ಕೆಲವು ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಹೊಸದಾಗಿ ಅಭಿವೃದ್ಧಿಯಾಗುತ್ತಿರುವ ಬಡಾವಣೆಯಲ್ಲಿ ಯುಜಿಡಿ, ರಸ್ತೆ ಹಾಗು ಚರಂಡಿ ಸೇರಿ ಮೂಲಭೂತ ಸೌಲಭ್ಯಗಳ ಕೊರತೆ ಇರುವ ಹಿನ್ನಲೆಯಲ್ಲಿ ಹಂತ-ಹಂತವಾಗಿ ಎಲ್ಲಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದರು.

ಮೊದಲ ಹಂತದಲ್ಲಿ ಒಳಚರಂಡಿ (ಯುಜಿಡಿ) ಕಾಮಗಾರಿ ಪೂರ್ಣಗೊಳಿಸಲಾಗುವುದು. ಬಳಿಕ ರಸ್ತೆ ನಿರ್ಮಾಣ ಹಾಗು ಚರಂಡಿ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಪೂರ್ಣಗೊಳಿಸಲಾಗುವುದು. ಮಹಾತ್ಮ ಗಾಂಧಿ ವಿಕಾಸ ಯೋಜನೆಯಡಿ 9 ಕೋ.ರೂ. ವೆಚ್ಚದಲ್ಲಿ ರಿಂಗ್ ರಸ್ತೆಯಿಂದ ಆರ್‌ಟಿಓ ಕಚೇರಿ ಮಾರ್ಗವಾಗಿ ಅರಸೀಕೆರೆ ರಸ್ತೆ

» ನಾಲ್ಕನೇ ಪುಟದಲ್ಲಿ

ಮಳೆ ಮುನಿಸಿನಿಂದ ಸಂಕಷ್ಟ | 56 ಸಾವಿರ ಹೆಕ್ಟೇರ್‌ಗೆ ನೀರೊದಗಿಸುವ ಬಲ ಮೇಲ್ದಂಡೆ

# ನಾಲೆಗಳಿಗೆ ಹರಿಯದ ಹೇಮಾವತಿ ನೀರು : ಭತ್ತ ನಾಟಿ ವಿಳಂಬ

• ಪ್ರಜೋದಯ ವರದಿ

**ಹಾಸನ:** ಮುಂಗಾರು ಮಳೆ ಕೊರತೆಯಿಂದ ಹೇಮಾವತಿ ಜಲಾಶಯದಲ್ಲಿ ನೀರು ಸಂಗ್ರಹವಾಗದ ಹಿನ್ನಲೆಯಲ್ಲಿ ನಾಲೆಗಳಿಗೆ ನೀರು ಹರಿಯದೆ ಭತ್ತದ ನಾಟಿಗೆ ತೊಡಕಾಗಿ ಪರಿಣಮಿಸಿದೆ.

ಅರಕಲಗೂಡು, ಹೊಳೆನರಸೀಪುರ ವ್ಯಾಪ್ತಿಯಲ್ಲಿ ಭತ್ತ ನಾಟಿಗೆ ರೈತರು ಸಿದ್ಧತೆ ಮಾಡಿಕೊಂಡಿದ್ದರಾದರೂ ವರುಣನ ಮುನಿಸು ಅನ್ನದಾತರಿಗೆ ಶಾಪವಾಗಿ ಪರಿಣಮಿಸಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಹೇಮಾವತಿ ನದಿಯಲ್ಲಿ ಸಮರ್ಪಕ ನೀರಿನ ಹರಿವು ಕಂಡು ಬಂದಿದ್ದು, ಜಲಾಶಯದಲ್ಲಿಯೂ ಉತ್ತಮ ಪ್ರಮಾಣದ ನೀರು ಸಂಗ್ರಹವಾಗಿತ್ತು. 37 ಟಿಎಂಸಿ ಸಾಮರ್ಥ್ಯದ ಗೊರೂರು ಹೇಮಾವತಿ ಜಲಾಶಯದಲ್ಲಿ ಸದ್ಯ ಕುಡಿಯುವ ನೀರಿನ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಸುಮಾರು 23 ಟಿಎಂಸಿ ನೀರಿದೆ. ಕಳೆದ ವರ್ಷ ಈ ಹೊತ್ತಿಗೆ 32 ಟಿಎಂಸಿ ನೀರಿತ್ತು. ಕೊಡಗು, ಚಿಕ್ಕಮಗಳೂರು ಭಾಗದಲ್ಲಿ ಕಳೆದ ನಾಲ್ಕೈದು ದಿನಗಳಿಂದ ಮಳೆ ಸುರಿಯುತ್ತಿರುವುದರಿಂದ ಒಳಹರಿವು ಪ್ರಮಾಣ 12859 ಕ್ಯೂಸೆಕ್ ಇದ್ದು, ಹೊರ ಹರಿವು 500 ಕ್ಯೂಸೆಕ್ ಇದೆ.



ಕಳೆದ ವರ್ಷ ಈ ಅವಧಿಗೆ ಹೇಮಾವತಿ ಎಡದಂಡೆ ನಾಲೆಗೆ 1450 ಕ್ಯೂಸೆಕ್ ನೀರು ಹರಿಸಲಾಗುತ್ತಿತ್ತು. ಆದರೆ, ಈ ಬಾರಿ ಮುಂಗಾರು ಕೈಕೊಟ್ಟ ಪರಿಣಾಮ ಜಲಾಶಯಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ಒಳಹರಿವು ದೊರೆಯದೆ ಪರಿಸ್ಥಿತಿ ಸಂಕಷ್ಟಕರವಾಗಿದೆ.

### ಭತ್ತದ ನಾಟಿಗೆ ಕಂಟಕ

ಹೇಮಾವತಿ ಬಲದಂಡೆ ನಾಲೆಯ ಸುಮಾರು 3,590 ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ಈ ಭಾಗದ ರೈತರು ಸಂಪೂರ್ಣವಾಗಿ ನಾಲೆ ನೀರನ್ನೇ ಅವಲಂಬಿಸಿದ್ದಾರೆ. ಇದೇ ರೀತಿ ಅರಕಲಗೂಡು ಮಾತ್ರವಲ್ಲದೆ ಹಳ್ಳಿಮೈಸೂರು, ಕೆ.ಆರ್.ಪೇಟೆ ಹಾಗು ಕೆ.ಆರ್.ನಗರ ತಾಲ್ಲೂಕುಗಳ ವ್ಯಾಪ್ತಿಯ ಸುಮಾರು 56 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುವ ಬಲಮೇಲ್ದಂಡೆ ನಾಲೆಯಲ್ಲಿಯೂ ಇನ್ನೂ ನೀರು ಹರಿಸಿಲ್ಲ. ಈ ಪೈಕಿ ಅರಕಲಗೂಡು ತಾಲ್ಲೂಕಿನಲ್ಲಿ 12430 ಎಕರೆ ಅಚ್ಚುಕಟ್ಟು ಜಮೀನಿದೆ. ಪರಿಣಾಮ ಸಾವಿರಾರು ಎಕರೆ ಪ್ರದೇಶದಲ್ಲಿ ಭತ್ತದ ನಾಟಿ ಆರಂಭವಾಗದೆ ರೈತರು ನಾಲೆ ನೀರಿಗಾಗಿ ಕಾದು ಕುಳಿತಿದ್ದಾರೆ.

### ಬರಿದಾದ ಕೆರೆಕಟ್ಟೆಗಳು

ನಾಲೆಗಳಿಗೆ ನೀರು ಹರಿಸದ ಕಾರಣ ನಾಲೆ ಆಧಾರಿತ ಕೆರೆಕಟ್ಟೆಗಳು ಸಂಪೂರ್ಣ ಬರಿದಾಗಿವೆ. ಸಾಮಾನ್ಯವಾಗಿ ಈ ವೇಳೆಗೆ ಕೆರೆಗಳು ತುಂಬಿ ರೈತರು ನಾಟಿ ಕಾರ್ಯದಲ್ಲಿ ನಿರತರಾಗಿರಬೇಕಾಗಿದ್ದರೆ, ಈ ಬಾರಿ ಬಹುತೇಕ ಕೆರೆಗಳ ತಳ ಕಾಣುವಂತಾಗಿದೆ. ಅದರಿಂದ ಅಂತರ್ಜಲ ಮಟ್ಟವೂ ಕುಸಿಯುವ ಆತಂಕ ವ್ಯಕ್ತವಾಗಿದೆ. ಮಲ್ಲಿಪಟ್ಟಣ ಹೋಬಳಿ ಸುತ್ತಮುತ್ತ ಕೆರೆಕಟ್ಟೆಗಳು ತುಂಬಿ ಈ ವೇಳೆಗೆ ಭತ್ತದ ನಾಟಿ ಮಾಡಬೇಕಿತ್ತು.

### ಮೋಡವಿದ್ದರೂ ಮಳೆ ಇಲ್ಲ

ಕಳೆದ ಕೆಲವು ದಿನಗಳಿಂದ ಮೋಡ ಕವಿದ ವಾತಾವರಣ ನಿರ್ಮಾಣವಾಗುತ್ತಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗಿಲ್ಲ. ರೈತರು ಪ್ರತಿದಿನವೂ ಆಕಾಶದತ್ತ ಚಿತ್ತ ಹರಿಸಿ ಮಳೆಯ ನಿರೀಕ್ಷೆಯಲ್ಲಿದ್ದರೂ ಮೋಡಗಳು ಮಳೆಯಿಲ್ಲದೆ ಮಾಯವಾಗುತ್ತಿವೆ. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾದರೆ ಮಾತ್ರ ಜಲಾಶಯಕ್ಕೆ ಹೆಚ್ಚಿನ ಒಳಹರಿವು ಬಂದು ನಾಲೆಗಳಿಗೆ ನೀರು ಬಿಡುವ ಸಾಧ್ಯತೆ ಇದೆ.

ಭತ್ತದ ನಾಟಿಗೆ ಸೂಕ್ತ ಸಮಯ ಕಳೆದು ಹೋಗುತ್ತಿರುವುದರಿಂದ ರೈತರಲ್ಲಿ ಆತಂಕ ಹೆಚ್ಚಾಗಿದೆ. ಜಮೀನುಗಳನ್ನು ಉಳುಮೆ ಮಾಡಿ ಸಿದ್ಧಪಡಿಸಲು ಸಾಧ್ಯವಾಗಿಲ್ಲ. ಅನೇಕ ರೈತರು ನಾಟಿ ಮಾಡಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ನಾಟಿ ವಿಳಂಬವಾದರೆ ಇಳುವರಿ ಕುಸಿತದ ಜತೆಗೆ ಆರ್ಥಿಕ ನಷ್ಟವೂ ಉಂಟಾಗುವ ಭೀತಿ ಎದುರಾಗಿದೆ.

ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಏತ ನೀರಾವರಿ ಯೋಜನೆಯ ಕಾಮಗಾರಿ ಕಳೆದ ಏಳು ವರ್ಷಗಳಿಂದಲೂ ಕುಂಟುತ್ತಾ ಸಾಗುತ್ತಿದ್ದು, ಇದುವರೆಗೆ ಪೂರ್ಣಗೊಂಡಿಲ್ಲ. ಯೋಜನೆ ಪೂರ್ಣಗೊಂಡಿದ್ದರೆ ಮಲ್ಲಿಪಟ್ಟಣ ಹಾಗು ಕೊಣನೂರು ಹೋಬಳಿ ವ್ಯಾಪ್ತಿಯ ಕೆರೆ-ಕಟ್ಟೆಗಳಿಗೆ ಹೇಮಾವತಿ ನೀರು ಹರಿದು ಸಾವಿರಾರು ರೈತರಿಗೆ ಅನುಕೂಲವಾಗುತ್ತಿತ್ತು. ಆದರೆ ಕಾಮಗಾರಿ ವಿಳಂಬದಿಂದ ಆ ಭಾಗದ ರೈತರೂ ನೀರಿನ ಅಭಾವ ಎದುರಿಸುವಂತಾಗಿದೆ.

ಕೆರೆ-ಕಟ್ಟೆಗಳು ಭರ್ತಿಯಾಗದೆ ಜಾನುವಾರುಗಳಿಗೆ ಕುಡಿಯುವ ನೀರಿನ ಸಂಕಷ್ಟ ಎದುರಾಗುವ ಜತೆಗೆ ಭತ್ತದ ಬೆಳೆ ಇಲ್ಲದಿದ್ದರೆ ಮೇವಿಗೂ ತೀವ್ರ ಬರ ಎದುರಾಗಲಿದೆ. ಮಳೆ ಕೊರತೆ ಹಾಗು ಹೇಮಾವತಿ ನಾಲೆಗಳಿಗೆ ನೀರು ಹರಿಯದಿರುವ ಪರಿಣಾಮ ಈ ಬಾರಿ ಭತ್ತದ ಬೆಳೆ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಇದು ಕೇವಲ ರೈತರ ಆರ್ಥಿಕತೆಗೆ ಮಾತ್ರವಲ್ಲದೆ ಜಾನುವಾರುಗಳ ಮೇವಿನ ಮೇಲೂ ಗಂಭೀರ ಪರಿಣಾಮ ಬೀರುವ ಆತಂಕ ಎದುರಾಗಿದೆ.

> ಕೃಷ್ಣ, ತುಂಗಾ ಭದ್ರ ನದಿಗಳಿಗೆ ಹೋಲಿಸಿದರೆ ಕಾವೇರಿ ಹರಿವಿನ ಪ್ರಮಾಣದಲ್ಲಿ ಸಣ್ಣದೆನಿಸಿದರೂ ವಿವಾದದ ವಿಷಯದಲ್ಲಿ ಬಹುದೊಡ್ಡ ಕಿಡಿಯನ್ನೇ ಹೊತ್ತಿಸುತ್ತದೆ. ಶತಮಾನಗಳ ಇತಿಹಾಸವಿರುವ ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಎಲ್ಲ ರೀತಿಯ ಕಾನೂನು ಹೋರಾಟಗಳು ನಡೆದು ಅಂತಿಮ ತೀರ್ಪು ಪ್ರಕಟವಾದರೂ, ಆಗಾಗ್ಗೆ ವಿವಾದ ಭುಗಿಲೇಳುವುದಕ್ಕೆ ಪ್ರಮುಖ ಕಾರಣ ಮಳೆ ಕೊರತೆ.

# ಕಾವೇರಿ ಕಾವಾರಿಸಲು ಸಂಕಷ್ಟ ಸೂತ್ರವೊಂದೇ ಪರಿಹಾರ

ಕರ್ನಾಟಕಕ್ಕೆ ನೀರಾವರಿ ವಿವಾದ, ಕಾನೂನು ಹೋರಾಟಗಳೇನು ಹೊಸದಲ್ಲ. ಕೃಷ್ಣೆಯ ವಿಷಯದಲ್ಲಿ ನೆರೆ ರಾಜ್ಯ ಆಂಧ್ರ, ತೆಲಂಗಾಣ ಹಾಗೂ ಮಹಾರಾಷ್ಟ್ರದೊಂದಿಗೆ, ಮಹದಾಯಿ ವಿಷಯದಲ್ಲಿ ಗೋವಾ, ಮಹಾರಾಷ್ಟ್ರದೊಂದಿಗೆ ದಶಕಗಳಿಂದ ತಿಕ್ಕಾಟವಿದ್ದೇ ಇದೆ. ಅತ್ತ ಆಂಧ್ರದೊಂದಿಗೆ ತುಂಗಾ-ಭದ್ರಾ ವಿಷಯದಲ್ಲಿ ನಡೆಯುತ್ತಲೇ ಇದೆ. ಆದರೆ ಈ ಎಲ್ಲವನ್ನು ಮೀರಿ, ಇಡೀ ದೇಶದ ಗಮನ ಸೆಳೆಯುವ, ಎರಡು ರಾಜ್ಯಗಳ ನಡುವೆ ಹೋರಾಟದ ಕಿಡಿ ಹೊತ್ತಿಸುವ, ಪ್ರತಿಭಟನೆ, ಬಂದ್‌ಗೆ ಕಾರಣವಾಗುವ ವಿವಾದವೆಂದರೆ ಕಾವೇರಿ ನದಿ ನೀರು ಹಂಚಿಕೆ.

ಕೃಷ್ಣ, ತುಂಗಾ ಭದ್ರ ನದಿಗಳಿಗೆ ಹೋಲಿಸಿದರೆ ಕಾವೇರಿ ಹರಿವಿನ ಪ್ರಮಾಣದಲ್ಲಿ ಸಣ್ಣದೆನಿಸಿದರೂ ವಿವಾದದ ವಿಷಯದಲ್ಲಿ ಬಹುದೊಡ್ಡ ಕಿಡಿಯನ್ನೇ ಹೊತ್ತಿಸುತ್ತದೆ. ಶತಮಾನಗಳ ಇತಿಹಾಸವಿರುವ ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಎಲ್ಲ ರೀತಿಯ ಕಾನೂನು ಹೋರಾಟಗಳು ನಡೆದು ಅಂತಿಮ ತೀರ್ಪು ಪ್ರಕಟವಾದರೂ, ಆಗಾಗ್ಗೆ ವಿವಾದ ಭುಗಿಲೇಳುವುದಕ್ಕೆ ಪ್ರಮುಖ ಕಾರಣ ಮಳೆ ಕೊರತೆ. ಸಮೃದ್ಧ ಮುಂಗಾರು ಮಳೆಯಾದರೆ, ಕಾವೇರಿಯಷ್ಟು ಶಾಂತ ಮತ್ತೊಂದಿರುವುದಿಲ್ಲ. ಆದರೆ ಮಳೆ ಕೊರತೆ ಎದುರಾಗುತ್ತಿದ್ದಂತೆ ಬರಗಾಲ ನಿರ್ವಹಣೆ ಮೀರಿದ ಒತ್ತಡ ತಮಿಳುನಾಡಿಗೆ ನೀರು ಹರಿಸುವ ವಿಷಯದಲ್ಲಿ ಕರ್ನಾಟಕ ಸರಕಾರಕ್ಕೆ ಎದುರಾಗುವುದು ಸುಳ್ಳಲ್ಲ.

ಸಂಕಷ್ಟ ವರ್ಷದಲ್ಲಿ ಕುಡಿಯುವ ನೀರಿಗೆ ಮೊದಲ ಆದ್ಯತೆ, ಕೃಷಿ ಮತ್ತು ನೀರಾವರಿಗೆ ಎರಡನೇ ಆದ್ಯತೆ, ಜಲವಿದ್ಯುತ್‌ಗೆ ಮೂರನೇ ಆದ್ಯತೆ, ಕೈಗಾರಿಕೆಗಳಿಗೆ ನಾಲ್ಕನೇ ಆದ್ಯತೆ ಹಾಗೂ ಐದನೇ ಆದ್ಯತೆಯಾಗಿ ಪರಿಸರ ಹಾಗೂ ಇತರ ಬಳಕೆಗೆ ನೀರನ್ನು ಹಂಚಬೇಕು ಎನ್ನುವುದು ರಾಷ್ಟ್ರೀಯ ಜಲ ನೀತಿಯಲ್ಲಿಯೇ ಸ್ಪಷ್ಟವಾಗಿದೆ.

ಇದಕ್ಕೆ ಪೂರಕವಾಗಿಯೇ ಸುಪ್ರೀಂ ಕೋರ್ಟ್ ತನ್ನ ಅಂತಿಮ ಆದೇಶದಲ್ಲಿ ಕರ್ನಾಟಕಕ್ಕೆ ಹೆಚ್ಚುವರಿ 4.75 ಟಿಎಂಸಿ ನೀರನ್ನು ಹಂಚಿಕೆ ಮಾಡಿತ್ತು. ಆದರೂ, ಪ್ರತಿವರ್ಷ ಮುಂಗಾರು ಕೈಕೊಟ್ಟಾಗ ತಮಿಳುನಾಡು ತನ್ನ ರಾಜ್ಯದ ಬೆಳೆಗಳನ್ನು ಉಳಿಸಿಕೊಳ್ಳಲು ನೀರು ಬೇಕು ಎಂದು ಕ್ಯಾತೆ ಶುರು ಮಾಡುತ್ತದೆ. ಕರ್ನಾಟಕದಲ್ಲಿ ಕುಡಿಯುವ ನೀರಿಗೆ ಬರವಿದ್ದಾಗಲೂ ತನ್ನ ರೈತರ ಬೆಳೆಗೆ ನೀರು ಬಿಡಿ ಎನ್ನುವ ತಮಿಳುನಾಡಿನ ವಾದವೇ ಕಿಡಿ ಹತ್ತಲು ಪ್ರಮುಖ ಕಾರಣ ಎಂದರೆ ತಪ್ಪಾಗುವುದಿಲ್ಲ.

ಮಳೆ ಕೊರತೆ ವರ್ಷ ಎದುರಾದಾಗೆಲ್ಲ ಕರ್ನಾಟಕ-ತಮಿಳುನಾಡು ನಡುವೆ ಈ ರೀತಿಯ ಗೊಂದಲ, ಗಲಾಟೆಗಳು ಸರ್ವೇಸಾಮಾನ್ಯ. ಅಂತಿಮ ಅಧಿಸೂಚನೆಯ ಬಳಿಕ ಬರಗಾಲ ಎದುರಾದಾಗಲೆಲ್ಲ ತಮಿಳುನಾಡು ಕಾವೇರಿ ನೀರು ನಿರ್ವಹಣಾ ಸಮಿತಿಯ ಮುಂದೆ ಅರ್ಜಿ ಸಲ್ಲಿಸುವುದು, ಅದಕ್ಕೆ ಕರ್ನಾಟಕ ವಿರೋಧ ವ್ಯಕ್ತಪಡಿಸಿದ ಹೊರತಾಗಿಯೂ ಇಂತಿಷ್ಟು ನೀರು ಬಿಡಿ ಎಂದು ಸಮಿತಿಯಿಂದ ಆದೇಶವಾಗುವುದು, ಈ ಆದೇಶ ಪ್ರಶ್ನಿಸಿ ಪ್ರಾಧಿಕಾರದ ಮುಂದೆ ಹೋಗುವುದು ಸಂಪ್ರದಾಯ ಎನ್ನುವಂತಾಗಿದೆ.

ಪ್ರಾಧಿಕಾರವೂ ನೀರು ಹರಿಸುವಂತೆ ಹೇಳಿದಾಗ, ಈ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಸುಪ್ರೀಂ ಕೋರ್ಟ್ ಮೆಟ್ಟಿಲೇರುತ್ತದೆ. ಇಲ್ಲವೇ, ನೀರು ಹರಿಸಿಲ್ಲ ಎಂದು ಕರ್ನಾಟಕ ಸರಕಾರದ ನಡೆಯನ್ನು ಪ್ರಶ್ನಿಸಿ ತಮಿಳುನಾಡಿನವರು ಸುಪ್ರೀಂ ಕೋರ್ಟ್ ಮೆಟ್ಟಿಲೇರುತ್ತಾರೆ. ಮಳೆಯ ಕೊರೆತ ಹೊರತಾಗಿಯೂ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ತೀರ್ಪನ್ನು ಪ್ರಶ್ನಿಸಿ ಈವರೆಗೆ ಆರು ಬಾರಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗಿದೆ. ಆದರೆ ಈ ಆರು ಬಾರಿಯೂ, ಪ್ರಾಧಿಕಾರದ ತೀರ್ಮಾನವನ್ನು ಪಾಲಿಸುವಂತೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಏಕೆಂದರೆ, ನೀರು ವಿವಾದ ಪ್ರತಿಬಾರಿಯೂ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತುವುದು ಬೇಡ ಎನ್ನುವ ಕಾರಣಕ್ಕೆ ರಚಿಸಿರುವ ಪ್ರಾಧಿಕಾರದಲ್ಲಿ ಕರ್ನಾಟಕ, ತಮಿಳುನಾಡು, ಕೇರಳ, ಪಾಂಡಿಚೇರಿಯ ಪ್ರತಿನಿಧಿಗಳು ಸೇರಿದಂತೆ ಕೇಂದ್ರ ಜಲಶಕ್ತಿ ಇಲಾಖೆ ಅಧಿಕಾರಿಗಳು, ತಜ್ಞರನ್ನು ಒಳಗೊಂಡ ಸಮಿತಿಯಿದೆ. ಪ್ರಾಧಿಕಾರದ ಬಳಿ ತಾಂತ್ರಿಕ ಮಾಹಿತಿಯಿದೆ. ಆ ಮಾಹಿತಿಯ ಆಧಾರದಲ್ಲಿಯೇ ನೀರು ಹರಿಸುವಂತೆ ಸೂಚನೆ ನೀಡಲಾಗುತ್ತದೆ. ಆದ್ದರಿಂದ ಈ ಆದೇಶದಲ್ಲಿ ಬದಲಾವಣೆ ಮಾಡುವ ಅಗತ್ಯವಿಲ್ಲ ಎನ್ನುವ ಮಾತನ್ನು ಪ್ರತಿಬಾರಿ ಸುಪ್ರೀಂ ಕೋರ್ಟ್ ಹೇಳುತ್ತದೆ. ನೀರು ಬಿಡುಗಡೆ ವಿರೋಧಿಸಿ ಕನ್ನಡಪರ ಸಂಘಟನೆ ನಡೆಸುವ ಪ್ರತಿಭಟನೆ, ಕರ್ನಾಟಕ ಬಂದ್, ಹೋರಾಟಗಳು ಕೆಲವೊಮ್ಮೆ ಕರ್ನಾಟಕಕ್ಕೆ ವ್ಯತಿರಿಕ್ತ ಪರಿಣಾಮ ಬೀರಿರುವ ಉದಾಹರಣೆಗಳು ನಮ್ಮ ಮುಂದೆ ಎನ್ನುವುದನ್ನು ಮರೆಯಬಾರದು.

ಕಾವೇರಿ ನ್ಯಾಯಾಧೀಕರಣ, ಸುಪ್ರೀಂ ಕೋರ್ಟ್ ಸರಾಸರಿ ಮಳೆಯನ್ನು ಗಮನದಲ್ಲಿರಿಸಿಕೊಂಡು ಸೂತ್ರವೊಂದನ್ನು ಸಿದ್ಧಪಡಿಸಿದೆ. ಆದರೆ ಸಂಕಷ್ಟ ಸಮಯದಲ್ಲಿ ಯಾವ ಸೂತ್ರದಲ್ಲಿ ನೀರು ಹರಿಸಬೇಕು ಎನ್ನುವ ವಿಷಯದಲ್ಲಿ ಸ್ಪಷ್ಟನೆ ಇಲ್ಲದಿರುವುದೇ ಇಂದಿನ ಈ ಸಮಸ್ಯೆಗೆ ಕಾರಣ. ಕಾವೇರಿ ನೀರು ಬಿಡಬಾರದು ಎಂದು ಯಾರೆಷ್ಟೇ ಹೋರಾಟ ಮಾಡಿದರೂ, ಕರ್ನಾಟಕ ಸರಕಾರ ಪೂರ್ಣ ಪ್ರಮಾಣದಲ್ಲಿ ಅಲ್ಲದಿದ್ದರೂ ಒಂದು ಭಾಗವನ್ನಾದರೂ ನೀಡಬೇಕಾದ ಸ್ಥಿತಿಯಲ್ಲಿದೆ.

ಇತಿಹಾಸವನ್ನು ಕೆದಕಿದರೆ, 1991ರಲ್ಲಿ ಕರ್ನಾಟಕದಲ್ಲಿ ತೀವ್ರ ಮಳೆ ಅಭಾವವಿದ್ದಾಗಲೂ, ಸುಮಾರು 205 ಟಿಎಂಸಿ ನೀರು ಬಿಡಬೇಕು ಎನ್ನುವ ಆದೇಶವನ್ನು ಕಾವೇರಿ ನ್ಯಾಯಮಂಡಳಿ ನೀಡಿತ್ತು. ಈ ಆದೇಶವನ್ನು ಧಿಕ್ಕರಿಸಿ ನೀರು ಬಿಡದೇ ಇರಲು ಅಂದಿನ ಎಸ್.ಬಂಗಾರಪ್ಪನವರ ಸರಕಾರ, ಸುಗ್ರೀವಾಜ್ಞೆ ಹೊರಡಿಸಿದ್ದು ಇಂದಿಗೂ ಕರ್ನಾಟಕ ನೀರಾವರಿ ವಿವಾದದಲ್ಲಿ ತೆಗೆದುಕೊಂಡ ದಿಟ್ಟ ತೀರ್ಮಾನವೆಂದೇ ವಿಶ್ಲೇಷಿಸಲಾಗುತ್ತದೆ. ಆದರೆ ಬಂಗಾರಪ್ಪನವರ ಸರಕಾರದ ಈ ನಡೆಯನ್ನು ಕಟುಶಬ್ದದಲ್ಲಿ ಸುಪ್ರೀಂ ಕೋರ್ಟ್ ಟೀಕಿಸಿದ್ದಷ್ಟೇ ಅಲ್ಲದೇ, ಅಂದಿನ ಮುಖ್ಯ ಕಾರ್ಯದರ್ಶಿಗೆ ಕಾನೂನು ಸಂಕಷ್ಟ ಎದುರಾಯಿತು.

ನೀರು ಬಿಡದಿದ್ದರೆ ನ್ಯಾಯಾಂಗ ನಿಂದನೆ ಪ್ರಕರಣ ಎದುರಿಸಬೇಕಾಗುತ್ತದೆ ಎನ್ನುವ ಸ್ಪಷ್ಟ ಎಚ್ಚರಿಕೆಯನ್ನು ಕರ್ನಾಟಕ ಸರಕಾರಕ್ಕೆ ನೀಡಿದ ಬಳಿಕ ಅನಿವಾರ್ಯವಾಗಿ ನೀರು ಬಿಡಬೇಕಾಯಿತು. ಈ ಘಟನೆಯ ಬಳಿಕ ಎಸ್.ಎಂ.ಕೃಷ್ಣ ಸೇರಿದಂತೆ ಹಲವು ಮುಖ್ಯಮಂತ್ರಿಗಳ ಕಾಲದಲ್ಲಿ ಈ ಪ್ರಕರಣದ ಬಳಿಕ, ಹಲವು ಬಾರಿ ನೀರು ಹರಿಸಲು ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿಯಿದ್ದರೂ ನೀರು ಬಿಡುವುದಿಲ್ಲ ಎಂದು ಗಟ್ಟಿಧ್ವನಿಯಲ್ಲಿ ಹೇಳಲು ಯಾವ ಸರಕಾರಗಳೂ ಮುಂದಾಗಲಿಲ್ಲ.

ಹಾಗೆ ನೋಡಿದರೆ, ಕರ್ನಾಟಕ-ತಮಿಳುನಾಡು ಕಾವೇರಿ ನೀರು ಹಂಚಿಕೆ ವಿವಾದ ಇಂದು ನಿನ್ನೆಯದಲ್ಲ. ಕಾವೇರಿಯೂ ಕೇರಳ, ಕರ್ನಾಟಕ, ತಮಿಳುನಾಡು ಹಾಗೂ ಪಾಂಡಿಚೇರಿಯಲ್ಲಿ ಹರಿದರೂ, ಬಹುಪಾಲು ನೀರು ಕರ್ನಾಟಕ ತಮಿಳುನಾಡಿಗೆ ಹಂಚಿಕೆಯಾಗುವುದರಿಂದ ಈ ಸಮಸ್ಯೆ ಎರಡು ರಾಜ್ಯಗಳ ನಡುವೆ ಉದ್ಭವಿಸುತ್ತದೆ. ವಿವಾದದ ಮೂಲ ನೋಡಿದರೆ, ಸುಮಾರು 130 ವರ್ಷದ ಹಿಂದೆ ಹೋಗುತ್ತದೆ.

1892ರಲ್ಲಿ ಮೈಸೂರು ಸಂಸ್ಥಾನ ಮತ್ತು ಬ್ರಿಟಿಷರ ಆಡಳಿತದಲ್ಲಿದ್ದ ಮದ್ರಾಸ್ ಪ್ರಾಂತ್ಯದ ನಡುವೆ ಒಪ್ಪಂದವಾಗಿತ್ತು. ಮೈಸೂರು ರಾಜರು ಕಾವೇರಿ ಮೇಲ್ದಂಡೆಯಲ್ಲಿರುವ ಮೈಸೂರು ಭಾಗದಲ್ಲಿ ಹೊಸ ನೀರಾವರಿ ಯೋಜನೆಗಳನ್ನು ಕೈಗೊಂಡರೆ ಮದ್ರಾಸ್ ಪ್ರಾಂತ್ಯದ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ ಎನ್ನುವ ಕಾರಣಕ್ಕೆ ವಿವಾದ ಶುರುವಾಯಿತು. ಆದರೆ ಈ ವಿಷಯದಲ್ಲಿ ಮೈಸೂರು, ಮದ್ರಾಸ್ ಪ್ರಾಂತ್ಯದ ನಡುವೆ ಭಿನ್ನ ನಿಲುವುಗಳ ಹೊರತಾಗಿಯೂ, ಕರ್ನಾಟಕದಲ್ಲಿ (ಅಂದಿನ ಮೈಸೂರು ಪ್ರಾಂತ್ಯ) ನಿರ್ಮಾಣವಾಗುವ ನೀರಾವರಿ ಯೋಜನೆಗಳಿಗೆ ಮದ್ರಾಸ್ ಸರಕಾರದ ಪೂರ್ವಾನುಮತಿ ಪಡೆಯಬೇಕು ಎನ್ನುವ ಸ್ಥಿತಿ ನಿರ್ಮಾಣವಾಯಿತು.

ಸುಮಾರು ಮೂರು ದಶಕದ ತಿಕ್ಕಾಟದ ಬಳಿಕ, 1924ರಲ್ಲಿ ಮೈಸೂರು ಮತ್ತು ಮದ್ರಾಸ್ ನಡುವೆ ಒಪ್ಪಂದ ನಡೆಯಿತು. ಅದರ ಪ್ರಕಾರ ಮೈಸೂರು ಪ್ರಾಂತ್ಯಕ್ಕೆ ಕೆಆರ್‌ಎಸ್ ಹಾಗೂ ಮದ್ರಾಸ್ ಪ್ರಾಂತ್ಯದಲ್ಲಿ ಮೆಟ್ಟೂರು ಜಲಾಶಯ ನಿರ್ಮಾಣಕ್ಕೆ ಅನುಮತಿ ಸಿಕ್ಕಿ, ನೀರಾವರಿ ವಿಸ್ತರಣೆಗೆ ಸಂಬಂಧಿಸಿದ ಕೆಲವೊಂದಷ್ಟು ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು.

ಒಪ್ಪಂದಲ್ಲಿ 50 ವರ್ಷದ ಬಳಿಕ ಮರುಪರಿಶೀಲಿಸಲು ಅವಕಾಶ ನೀಡಲಾಗಿತ್ತು. ಆದ್ದರಿಂದ 1974ನ್ನು ಕಾವೇರಿ ನೀರು ಹಂಚಿಕೆ ವಿವಾದದ ಮತ್ತೊಂದು ಪ್ರಮುಖ ಘಟ್ಟವೆಂದೇ ಹೇಳಲಾಗುತ್ತದೆ. ಮರು ಒಪ್ಪಂದದ ಸಮಯದಲ್ಲಿ ಕರ್ನಾಟಕ ಈ ಹಿಂದಿನ ಒಪ್ಪಂದದಲ್ಲಿ ತಮಗೆ ಅನ್ಯಾಯವಾಗಿದೆ ಎಂದು ವಾದಿಸಿದರೆ, ತಮಿಳುನಾಡು ಕಾವೇರಿ ನೀರು ಅವಲಂಬಿಸಿ ಬೆಳೆದ ತನ್ನ ಕೃಷಿ ಪ್ರದೇಶವನ್ನು ರಕ್ಷಿಸಲು ಕ್ರಮವಹಿಸಬೇಕು ಎಂದು ವಾದಿಸಿತ್ತು. ಅಲ್ಲಿಂದ ಈ ವಿವಾದ ಮಾತುಕತೆ ಹಂತ ಮೀರಿ, ರಾಜಕೀಯ ಮತ್ತು ಕಾನೂನು ಹೋರಾಟವಾಗಿ ತಿರುಗಿತು.

ಎರಡು ರಾಜ್ಯಗಳ ನಡುವೆ ಹತ್ತು ಹಲವು ಬಾರಿ ಮಾತುಕತೆ ನಡೆದರೂ ಒಮ್ಮತಕ್ಕೆ ಬರಲು ಸಾಧ್ಯವಾಗದೇ ಇದಿದ್ದರಿಂದ 1990ರಲ್ಲಿ ಕೇಂದ್ರ ಸರಕಾರ ಕಾವೇರಿ ಜಲ ವಿವಾದ ನ್ಯಾಯಮಂಡಳಿ ರಚಿಸಿತ್ತು. 1991ರಲ್ಲಿ ನ್ಯಾಯಮಂಡಳಿ ಕರ್ನಾಟಕದಿಂದ ತಮಿಳುನಾಡಿಗೆ ನಿರ್ದಿಷ್ಟ ಪ್ರಮಾಣದ ನೀರು ಹರಿಯಬೇಕೆಂಬ ಮಧ್ಯಂತರ ಆದೇಶ ನೀಡಲಾಯಿತು. ಆದರೆ ಇದರಿಂದ ಕರ್ನಾಟಕಕ್ಕೆ ಅನ್ಯಾಯವಾಗುತ್ತದೆ ಎಂದು ರಾಜ್ಯಾದ್ಯಂತ ಹೋರಾಟ ನಡೆದಿದ್ದರಿಂದ ಈ ವಿವಾದ ಕೇವಲ ಕೃಷಿ, ನೀರಾವರಿ, ಕುಡಿಯುವ ನೀರಿನ ಪ್ರಶ್ನೆಯಾಗಿ ಉಳಿಯದೇ ಭಾವನಾತ್ಮಕ ಹೋರಾಟವಾಯಿತು.

ಸುಮಾರು 17 ವರ್ಷಗಳ ವಿಚಾರಣೆಯ ಬಳಿಕ ಅಂದರೆ 2007ರಲ್ಲಿ ನ್ಯಾಯಮಂಡಳಿ ಅಂತಿಮ ತೀರ್ಪು ಪ್ರಕಟಿಸಿತು. ಅದರನ್ವಯ, ಲಭ್ಯವಿರುವ ಕಾವೇರಿ ನೀರನ್ನು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ನಡುವೆ ಹಂಚಿಕೆ ಮಾಡಲಾಯಿತು. ಸರಾಸರಿ 740 ಟಿಎಂಸಿ ನೀರಿನ ಪೈಕಿ ತಮಿಳುನಾಡಿಗೆ 419.25 ಟಿಎಂಸಿ, ಕರ್ನಾಟಕಕ್ಕೆ 270 ಟಿಎಂಸಿ, ಕೇರಳಕ್ಕೆ 30 ಟಿಎಂಸಿ ಮತ್ತು ಪುದುಚೇರಿಗೆ ಏಳು ಟಿಎಂಸಿ ನಿಗದಿಯಾಯಿತು.

ಇನ್ನುಳಿದ ನೀರು ಸಮುದ್ರಕ್ಕೆ ಹೋಗಬೇಕೆಂಬ ಆದೇಶವನ್ನು ಪ್ರಕಟಿಸಲಾಗಿತ್ತು. ಆದರೆ ಈ ಆದೇಶವನ್ನು ಪ್ರಶ್ನಿಸಿ, ಎರಡೂ ರಾಜ್ಯಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದಾಗ, 2018ರ ಫೆಬ್ರವರಿ 16ರಂದು ಸುಪ್ರೀಂ ಕೋರ್ಟ್ ಅಂತಿಮ ಆದೇಶದಲ್ಲಿ, ತಮಿಳುನಾಡು ಪಾಲಿನ 14.75 ಟಿಎಂಸಿ ನೀರನ್ನು ಕರ್ನಾಟಕಕ್ಕೆ ಕುಡಿಯುವ ನೀರಿನ ಕಾರಣಕ್ಕಾಗಿ ನೀಡಿ, ಅಂತಿಮವಾಗಿ ಕರ್ನಾಟಕಕ್ಕೆ 284.75 ಟಿಎಂಸಿ, ತಮಿಳುನಾಡಿಗೆ 404.25 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಯಿತು. ಈ ನಡುವೆ ಕರ್ನಾಟಕ-ತಮಿಳುನಾಡು ಗಡಿಯಲ್ಲಿರುವ ಬಿಳಿಗುಂಡ್ಲುವಿನಲ್ಲಿ 177 ಟಿಎಂಸಿ ನೀರು ಹರಿಯ ಬೇಕು. ಇಡೀ ವ್ಯವಸ್ಥೆಯನ್ನು ನಿರ್ವಹಣೆ ಮಾಡಲು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ಜಲ ನಿಯಂತ್ರಣ ಸಮಿತಿಯನ್ನು ರಚಿಸಲಾಯಿತು.



ಸಾಮಾನ್ಯ ವರ್ಷಗಳಲ್ಲಿ ಯಾವಾಗ ಎಷ್ಟು ನೀರನ್ನು ಕರ್ನಾಟಕ ತಮಿಳುನಾಡಿಗೆ ಹರಿಸಬೇಕು ಎನ್ನುವ ಸ್ಪಷ್ಟ ಆದೇಶವಿದೆ. ಆದರೆ ವಿವಾದಕ್ಕೆ ಕಾರಣವಾಗುವುದು ಈ ಆದೇಶವೇ ಎಂದರೆ ತಪ್ಪಾಗುವುದಿಲ್ಲ. ಕೇರಳ, ಕೊಡಗು ಭಾಗದಲ್ಲಿ ಉತ್ತಮ ಮಳೆಯಾದ ಸಮಯದಲ್ಲಿ, ನಿಗದಿಪಡಿಸಿರುವ ಪ್ರಮಾಣಕ್ಕಿಂತ ಹೆಚ್ಚಿನ ನೀರನ್ನೇ ಹರಿಸಲಾಗುತ್ತದೆ. ಉದಾಹರಣೆಗೆ ಕಳೆದ ವರ್ಷ 450 ಟಿಎಂಸಿಗೂ ಹೆಚ್ಚು ನೀರು ಹರಿದಿದೆ.

ಜಲಶಕ್ತಿ ಇಲಾಖೆ ನೀಡಿರುವ ಅಂಕಿ-ಅಂಶದ ಪ್ರಕಾರ, 2018-19ರಲ್ಲಿ ಸುಮಾರು 405.4 ಟಿಎಂಸಿ ನೀರು ಹರಿದಿದ್ದರೆ, 2022-23ರಲ್ಲಿ 667.483 ಟಿಎಂಸಿ ನೀರು ಹರಿದಿದೆ. ಆದರೆ 2023-24ರಲ್ಲಿ ತೀವ್ರ ಮಳೆ ಕೊರತೆ ಎದುರಾಗಿದ್ದರಿಂದ ಕೇವಲ 81 ಟಿಎಂಸಿ ನೀರು ಹರಿಸಲಾಗಿದೆ. ಮಳೆ ಉತ್ತಮವಾಗಿದ್ದ ಸಮಯದಲ್ಲಿ ಹೆಚ್ಚುವರಿ ನೀರಿನ ಲೆಕ್ಕವನ್ನು ನೀಡದ ತಮಿಳುನಾಡು ಸರಕಾರ, ಕಡಿಮೆ ನೀರು ಹರಿದಾಗ ಮಾತ್ರ ತನ್ನ ಧ್ವನಿ ಎತ್ತುತ್ತಿದೆ. ಹೆಚ್ಚುವರಿಯಾಗಿ ಹರಿಯುವ ನೀರನ್ನು ಮುಂದಿನ ವರ್ಷಕ್ಕೆ ತೋರಿಸಲು ಆದೇಶದಲ್ಲಿ ಅವಕಾಶವಿಲ್ಲದಿರುವುದರಿಂದ ಬರಗಾಲದ ವರ್ಷದಲ್ಲಿ ನೀರು ಹಂಚಿಕೆಯ ಸಮಸ್ಯೆ ಎದುರಾಗುತ್ತದೆ.

ಇನ್ನು ಸಂಕಷ್ಟ ವರ್ಷದಲ್ಲಿ ನೀರಿನ ಕೊರತೆ ಎದುರಾದಾಗ ಯಾವ ಪ್ರಮಾಣದಲ್ಲಿ ನೀರನ್ನು ಕಡಿತ ಗೊಳಿಸಬೇಕು ಎನ್ನುವ ವಿಷಯದಲ್ಲಿ ಸ್ಪಷ್ಟನೆ ಇಲ್ಲ. ಒಟ್ಟಾರೆ ಕೊರತೆಯಾಗಿರುವ ನೀರಿನ ಪ್ರಮಾಣವನ್ನು ಸಮಾನವಾಗಿ ಹಂಚಬೇಕು ಎನ್ನುವ ಪ್ರಸ್ತಾಪವಿದೆ. ಉದಾಹರಣೆಗೆ ಶೇ.10ರಷ್ಟು ನೀರು ಕಡಿಮೆ ಸಿಕ್ಕರೆ ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪುದುಚೇರಿನ ನೀರಿನ ಪ್ರಮಾಣವನ್ನು ಇಷ್ಟೇ ಪ್ರಮಾಣದಲ್ಲಿ ಇಳಿಸಬೇಕು ಎನ್ನುವ ಪ್ರಸ್ತಾಪವಿದೆ. ಆದರೆ ಈ ವಿಷಯದಲ್ಲಿ ಕರ್ನಾಟಕ ಹಾಗೂ ತಮಿಳುನಾಡಿಗೆ ಭಿನ್ನ ಅಭಿಪ್ರಾಯಗಳಿವೆ.

ಸಮೃದ್ಧಿ ವರ್ಷದಲ್ಲಿ ನೀರು ಹರಿಸುವಂತೆ ಸಂಕಷ್ಟದ ವರ್ಷದಲ್ಲಿ ಏನು ಮಾಡಬೇಕು ಎನ್ನುವ ವಿಷಯದಲ್ಲಿ ಸ್ಪಷ್ಟನೆ ಸಿಗಬೇಕಿದೆ. ಪ್ರಮುಖವಾಗಿ ಸುಪ್ರೀಂ ಕೋರ್ಟ್ ಆದೇಶದಂತೆ ಮೊದಲಿಗೆ ಕುಡಿಯುವ ನೀರಿಗೆ ಅಗತ್ಯವಿರುವಷ್ಟು ನೀರನ್ನು ಶೇಖರಿಸಿ, ಬಳಿಕ ಕೃಷಿಗೆ ಎಷ್ಟು ನೀರು ಲಭ್ಯವಿದೆ ಎನ್ನುವುದನ್ನು ಗಮನಿಸಬೇಕು.

ಕೇವಲ ನದಿಯ ಹರಿವನ್ನು ನೆಚ್ಚಿಕೊಳ್ಳದೆ, ತಮಿಳುನಾಡಿನ ಡೆಲ್ಟಾ ಪ್ರದೇಶದಲ್ಲಿ ಲಭ್ಯವಿರುವ ಅಂತರ್ಜಲ ಮಟ್ಟ ಹಾಗೂ ಮಣ್ಣಿನ ತೇವಾಂಶವನ್ನು ಪರಿಗಣಿಸಬೇಕು ಎನ್ನುವುದು ತಜ್ಞರ ಅಭಿಪ್ರಾಯ. ಈ ಎಲ್ಲವನ್ನು ಮೀರಿ, ಕರ್ನಾಟಕದಲ್ಲಿ ಮುಂಗಾರು ಕೈಕೊಟ್ಟರೂ, ತಮಿಳುನಾಡಿನಲ್ಲಿ ಹಿಂಗಾರು ಮಳೆ ಕೈಹಿಡಿಯುವ ಸಾಧ್ಯತೆಯಿರುತ್ತದೆ. ಆದ್ದರಿಂದ ತಮಿಳುನಾಡಿನಲ್ಲಿ ಹಿಂಗಾರು ಮಳೆಯ ಮುನ್ಸೂಚನೆಗಳನ್ನು ಗಮನಿಸಬೇಕು.

ಮೊದಲೇ ಹೇಳಿದಂತೆ ಕಾವೇರಿ ಎನ್ನುವುದು ಕೇವಲ ನದಿ ವಿವಾದವಾಗಿ ಉಳಿಯದೇ, ಕರ್ನಾಟಕ-ತಮಿಳುನಾಡಿನಲ್ಲಿ ರಾಜಕೀಯ ಅಸವಾಗಿದೆ. ಆದ್ದರಿಂದ ತಮ್ಮ ಪಾಲಿನ ನೀರನ್ನು ಪಡೆಯದೇ ಹೋದರೆ ರಾಜಕೀಯವಾಗಿ ತೀವ್ರ ಹಿನ್ನಡೆಯಾಗುತ್ತದೆ ಎನ್ನುವುದು ತಮಿಳುನಾಡು ರಾಜಕಾರಣಿಗಳ ಲೆಕ್ಕಾಚಾರ. ಇನ್ನೊಂದೆಡೆ ಮಂಡ್ಯ, ಮೈಸೂರು ಭಾಗದ ರೈತರಿಗೆ ನೀರು ಬಿಡದೇ ತಮಿಳುನಾಡಿಗೆ ನೀರು ಹರಿಸಿದರೆ ಕರ್ನಾಟಕ ಸರಕಾರದ ವಿರುದ್ಧ ಹೋರಾಟಗಳು ಶುರುವಾಗುತ್ತದೆ. ಸಂಕಷ್ಟ ಸೂತ್ರವನ್ನು ಅಳವಡಿಸಿ ಕೊಳ್ಳಲು ಸಾಧ್ಯವಾಗದೇ ಇರುವುದಕ್ಕೆ ಈ ಭಾವನಾತ್ಮಕ ವಿಷಯವೂ ಒಂದು ಪ್ರಮುಖ ಕಾರಣ.

ಕಾವೇರಿ ನದಿ ವಿವಾದ ನೀರು ಹಂಚುವಿಕೆ ಮೀರಿ ಭಾವನಾತ್ಮಕ ವಿಷಯವಾಗಿರುವುದರಿಂದ ಸಂಕಷ್ಟ ಸೂತ್ರವನ್ನು ಸಿದ್ಧಪಡಿಸಿ ಎರಡೂ ರಾಜ್ಯಗಳು ಒಪ್ಪುವುದು ಸುಲಭವಲ್ಲ. ಆದ್ದರಿಂದ ಕಾನೂನು ಮೀರಿದ ಪ್ರಕೃತಿಯ ಕೃಪೆಯಿಂದ ಮಾತ್ರವೇ ಈ ವಿವಾದ ತಣ್ಣಗಾಗಿಸಲು ಸಾಧ್ಯ. ಉದಾಹರಣೆಗೆ, ಕೆಲ ದಿನಗಳ ಹಿಂದೆ ಮಳೆ ಕೊರತೆ ಇದ್ದಿದ್ದರಿಂದ 3500 ಕ್ಯುಸೆಕ್ ನೀರು ಹರಿಸುವುದು ಸವಾಲು ಎನ್ನುವ ಪರಿಸ್ಥಿತಿ ಇತ್ತು. ಆದರೆ ನಾಲ್ಕೈದು ದಿನದ ಮಳೆಯಿಂದ ಇಡೀ ವಿವಾದವೇ ತಣ್ಣಗಾಗಿ ಪ್ರಾಧಿಕಾರ ಹೇಳಿದ್ದಕ್ಕಿಂತ ಹೆಚ್ಚು ನೀರು ಹರಿಯುವಂತಾಯಿತು. ರಾಜಕೀಯ, ಭಾವನಾತ್ಮಕ ವಿಷಯವಾಗಿರುವ ಕಾವೇರಿಯ ವಿವಾದ ತಣ್ಣಗಾಗಿಸಲು ಪ್ರಕೃತಿಯಿಂದ ಮಾತ್ರ ಸಾಧ್ಯ!

**- ರಂಜಿತ್** ಎಚ್ ಅಶ್ವತ್ಥ್

---



> ಸಾರ್ವಜನಿಕ ಶೌಚಾಲಯ ಎಂದರೆ ನಮ್ಮಲ್ಲಿ ಮೂಡುವ ಚಿತ್ರಣ ಬದಲಾಗಬೇಕಿದೆ. ನಾಲ್ಕು ಗೋಡೆಗಳ ಮಧ್ಯೆ ಒಂದಷ್ಟು ಕಮೋಡ್‌ಗಳನ್ನು ಹಾಕಿದರೆ ಶೌಚಾಲಯ ಸಿದ್ಧ ಎಂಬ ಹಳೆಯ ಸೂತ್ರವನ್ನು ಬಿಟ್ಟು ಕೃಷ್ಣಬೈರೇಗೌಡರು ಪ್ರಸ್ತಾಪಿಸಿದಂತೆ ಇವುಗಳಿಗೆ ಹೊಸ ರೂಪ ಕೊಡಬೇಕಾಗಿದೆ. ಸಾರ್ವಜನಿಕ ಶೌಚಾಲಯಗಳೂ ಕೂಡ ಮಾಲ್‌ಗಳಲ್ಲಿ, ಹೈಟೆಕ್ ಚಿತ್ರಮಂದಿರಗಳಲ್ಲಿ ಕಾಣುವ ರೆಸ್ಟ್ ರೂಮ್‌ಗಳ ಮಾದರಿಯಲ್ಲಿ ಇರಬೇಕು. ಇವುಗಳ ಒಳಹೊಕ್ಕಾಗ ಮೂಡುವ ಅನುಭೂತಿಯೇ ನಮ್ಮನ್ನು ಸ್ವಚ್ಛತೆಗೆ ಪ್ರೇರೇಪಿಸುವಂತಿರಬೇಕು.

# ಸ್ವಚ್ಛತೆ ಜತೆ ಶೌಚಾಲಯ ಅಭಿಯಾನವೂ ಮುಖ್ಯ

ಜಪಾನ್ ಪ್ರವಾಸಕ್ಕೆ ತೆರಳಿದ್ದ ಕನ್ನಡಿಗರೊಬ್ಬರು ಇತ್ತೀಚೆಗೆ ಅಲ್ಲಿನ ಸಾರ್ವಜನಿಕ ಶೌಚಾಲಯದ ಚಿತ್ರವೊಂದನ್ನು ಹಂಚಿಕೊಂಡು ಆ ದೇಶದಲ್ಲಿ ನೋಡಲೇಬೇಕಾದ ಪ್ರೇಕ್ಷಣೀಯ ಸ್ಥಳಗಳಲ್ಲಿ ಅಲ್ಲಿನ ಶೌಚಾಲಯಗಳೂ ಸೇರಿವೆ ಎಂದು ಹೇಳಿಕೊಂಡಿದ್ದರು. ಇದನ್ನು ಕೇಳಿ ನಾವು ಛೀ, ಥೂ ಅಂದುಕೊಳ್ಳಬಹುದು. ಶೌಚಾಲಯ, ಮೂತ್ರಾಲಯಗಳ ಸಾರ್ವಜನಿಕ ಪ್ರದರ್ಶನ ಬಿಡಿ, ಇವುಗಳನ್ನು ಸಾರ್ವಜನಿಕವಾಗಿ ಚರ್ಚಿಸಲೂ ಹೇಸಿಗೆ ಪಟ್ಟುಕೊಳ್ಳುವವರು ನಾವು. ಆದರೆ ಅಗತ್ಯ ಬಿದ್ದಾಗ ಪುರುಷಪುಂಗವರೆಲ್ಲರೂ ಸಾರ್ವಜನಿಕವಾಗಿ ದೇಹಬಾಧೆ ತೀರಿಸಿಕೊಳ್ಳಲು ಹಿಂದೇಟು ಹಾಕುವುದಿಲ್ಲ.

ಪಾಶ್ಚಾತ್ಯ ದೇಶಗಳಲ್ಲಿ ರಸ್ತೆ ನಿಯಮ, ಸುರಕ್ಷತೆ, ಸ್ವಚ್ಛತೆಗಳಿಗೆ ಎಷ್ಟು ಆದ್ಯತೆ ನೀಡುತ್ತಾರೋ ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಗೂ ಅಷ್ಟೇ ಪ್ರಮಾಣದ ಆದ್ಯತೆ ನೀಡುತ್ತಾರೆ. ಪಾದಚಾರಿ ರಸ್ತೆಗಳ ತೆರವು ಮೂಲಕ ಜನ ಮೆಚ್ಚುಗೆ ಗಳಿಸಿದ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡರು ಇದೀಗ, ಸಿಲಿಕಾನ್ ಸಿಟಿಯ ಸಾರ್ವಜನಿಕ ಶೌಚಾಲಯಗಳಿಗೂ ಹೊಸ ರೂಪ ಕೊಡುವುದಾಗಿ ತಿಳಿಸಿದ್ದಾರೆ. ಸಚಿವರು ಹೊಸ ರೂಪ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಸಾರ್ವಜನಿಕ ಶೌಚಾಲಯಗಳ ನಿರ್ಮಾಣವು ಬೆಂಗಳೂರು ಮಾತ್ರವಲ್ಲ ಇಡೀ ದೇಶದ ತುರ್ತು ಅಗತ್ಯ.

ಪಾದಚಾರಿ ಮಾರ್ಗ ಜನರ ಹಕ್ಕು ಎಂದು ಹೇಳಿರುವ ಸುಪ್ರೀಂಕೋರ್ಟ್, ಸಾರ್ವಜನಿಕ ಶೌಚಾಲಯಗಳು ಕೂಡ ನಮ್ಮ ಮೂಲಭೂತ ಹಕ್ಕಿನ ಭಾಗ ಎಂದು ಈ ಹಿಂದೆಯೇ ತೀರ್ಪು ನೀಡಿದೆ.

ಹೈಕೋರ್ಟ್‌ಗಳು ಕೂಡ ಈ ವಿಚಾರದಲ್ಲಿ ಹಲವು ತೀರ್ಪುಗಳನ್ನು ನೀಡಿವೆ. ಆದರೆ ಉಳಿದ ಅನೇಕ ತೀರ್ಪುಗಳಂತೆ ಇದಾವುದೂ ಕೂಡ ಜಾರಿಗೆ ಬಂದಿಲ್ಲ. ಪಾದಚಾರಿ ಮಾರ್ಗ ತೆರವಿಗೆ ಸುಪ್ರೀಂ ಕೋರ್ಟ್ ತೀರ್ಪನ್ನು ಅಸ್ತ್ರವಾಗಿ ಬಳಸಿಕೊಂಡ ಕೃಷ್ಣಬೈರೇಗೌಡರು ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕೂ ಸುಪ್ರೀಂಕೋರ್ಟ್ ಮತ್ತು ರಾಜ್ಯ ಹೈಕೋರ್ಟ್ ನೀಡಿರುವ ತೀರ್ಪುಗಳನ್ನೇ ಬಳಸಿಕೊಳ್ಳಬಹುದು.

2025ರ ಜನವರಿ 15ರಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಲ್ಲಿ ಎಲ್ಲರಿಗೂ ಸುಲಭವಾಗಿ ಸ್ವಚ್ಛ ಶೌಚಾಲಯಗಳು ಸಿಗುವುದು ಭಾರತೀಯ ಸಂವಿಧಾನದ 21ನೇ ವಿಧಿಯಡಿ (ಜೀವಿಸುವ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯ) ಬರುವ ಮೂಲಭೂತ ಹಕ್ಕು ಎಂದು ಸ್ಪಷ್ಟಪಡಿಸಿದೆ.

ನ್ಯಾಯಾಲಯಂಗ'ಳ'ಂ, ಹೆದ್ದಾರಿಗಳು ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಪುರುಷರು, ಮಹಿಳೆಯರು, ವಿಕಲಚೇತನರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಹಾಗೂ ಬಳಕೆಗೆ ಯೋಗ್ಯವಾದ ಶೌಚಾಲಯಗಳನ್ನು ನಿರ್ಮಿಸುವುದು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಜವಾಬ್ದಾರಿಯಾಗಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಜಪಾನ್‌ನಂತೆ ಬೆಂಗಳೂರಿನ ಶೌಚಾಲಯಗಳು ಪ್ರೇಕ್ಷಣೀಯ ಸ್ಥಳಗಳಾಗುವ ಅಗತ್ಯವಿಲ್ಲ. ಸಾರ್ವಜನಿಕರು ಶ್ವಾಸೋಚ್ವಾಸಗಳನ್ನು ಹಿಡಿದಿಟ್ಟುಕೊಳ್ಳದೆ ಒಳ ಹೋಗಿ, ನಿರಾಳರಾಗಿ ಬರಲು ಸಾಧ್ಯವಾದರೆ ಅಷ್ಟೇ ಸಾಕು. ನಾವೆಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಸಾರ್ವಜನಿಕ ಶೌಚಾಲಯಗಳ ಅಗತ್ಯವನ್ನು ಮನಗಂಡಿರುತ್ತೇವೆ. ಆದರೆ ಇದರ ಅಗತ್ಯವನ್ನು ಎಂದಿಗೂ ಬಾಯಿ ಬಿಟ್ಟು ಹೇಳಲು ಹಿಂಜರಿಯುತ್ತೇವೆ. ಸಾರ್ವಜನಿಕ ಶೌಚಾಲಯಕ್ಕೆ ಹೊಸ ರೂಪ ನೀಡುವ ಜತೆಗೆ ಅವುಗಳ ಸಂಖ್ಯೆಯನ್ನು ಹೆಚ್ಚಿಸಲು ಇದೀಗ ರಾಜ್ಯವ್ಯಾಪಿ ಕ್ರಮ ಕೈಗೊಳ್ಳಬೇಕಿದೆ. ನಗರದ ಮುಖ್ಯ ರಸ್ತೆಗಳಲ್ಲಿ ಕನಿಷ್ಠ ಎರಡು ಕಿಲೋ ಮೀಟರ್ ಗೊಂದರಂತೆ ಸಾರ್ವಜನಿಕ ಶೌಚಾಲಯ ನಿರ್ಮಾಣ ಕಡ್ಡಾಯಗೊಳಿಸಬೇಕಿದೆ.

ಬೆಂಗಳೂರು, ಮೈಸೂರಿನಂತಹ ನಗರಗಳಲ್ಲಿ ಇಲ್ಲಿ ಮೂತ್ರಿಸಬಾರದು ಎಂದು ಗೋಡೆಗಳಲ್ಲಿ ದಪ್ಪಕ್ಷರಗಳಲ್ಲಿ ಬರೆದಿರುವುದನ್ನು ಕಾಣಬಹುದು. ಜನ ಈ ಬೋರ್ಡ್ ನೋಡಿಕೊಂಡೇ ಅಲ್ಲಿಯೇ ತಮ್ಮ ಪ್ರಕೃತಿ ಭಾದೆಯನ್ನು ತೀರಿಸಿಕೊಳ್ಳುವುದು ಸಾಮಾನ್ಯ. ಸಾಂಸ್ಕೃತಿಕ ನಗರಿ ಮೈಸೂರಿನ ಬಸ್ ನಿಲ್ದಾಣದ ಸಮೀಪ ಕೆಲ ತಿಂಗಳ ಹಿಂದೆ ಇಂತಹ ಸ್ಥಳವೊಂದರಲ್ಲಿ ಕನ್ನಡಿಯನ್ನೇ ತಡೆಗೋಡೆಯಾಗಿ ಮಾಡಿ ಮೂತ್ರದಾನಿಗಳನ್ನು ದೂರವಿಡುವ ಪ್ರಯತ್ನ ಮಾಡಲಾಗಿತ್ತು. ಆದರೆ ನಂತರ ಅದೇ ಸ್ಥಳದಲ್ಲಿ ಕನ್ನಡಿ ನೋಡಿಕೊಂಡೇ ಮೂತ್ರಿಸುವವರ ಚಿತ್ರಗಳು ಪ್ರಕಟವಾಗಿದ್ದವು.




ನಿಸರ್ಗದ ತುರ್ತು ಕರೆ ಬಂದಾಗ ಮನುಷ್ಯನೂ ಪ್ರಾಣಿಯಾಗುತ್ತಾನೆ. ಸ್ಥಳ, ಸಂದರ್ಭ, ಸನ್ನಿವೇಶ ಎಲ್ಲವನ್ನೂ ಮರೆತು ಎಲ್ಲೋ ಮೂಲೆ ಜಾಗವನ್ನು ಹುಡುಕಿ ತನ್ನ ದೇಹಬಾಧೆಯನ್ನು ತೀರಿಸಿ ಕೊಳ್ಳುತ್ತಾನೆ. ಇದು ತಪ್ಪೆನ್ನುವುದು ಆತನಿಗೂ ಗೊತ್ತು. ಆದರೆ ಸಾರ್ವಜನಿಕವಾಗಿ ಮೂತ್ರಿಸುವುದು ತಪ್ಪೆನ್ನುವವರು ಅಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಶೌಚಾಲಯ/ ಮೂತ್ರಾಲಯಗಳನ್ನು ನಿರ್ಮಾಣ ಮಾಡಬೇಕೆಂದು ಹೇಳುವುದಿಲ್ಲ. ಇದು ನಮ್ಮ ವೈರುಧ್ಯ.

ಹಾಗೆಂದು ಸಾರ್ವಜನಿಕರ ದುಡ್ಡಿನಲ್ಲಿ ನಿರ್ಮಾಣವಾದ ಶೌಚಾಲಯಗಳಿಗೆ ಕೊರತೆ ಇಲ್ಲ. ಆದರೆ ಒಂದು ವರ್ಷ ಕಳೆಯುವುದರೊಳಗೆ ಅವು ಪಾಲು ಬೀಳುವುದೂ ಸಹಜ ಪ್ರಕ್ರಿಯೆಯಾಗಿದೆ. ಸ್ಥಳೀಯಾಡಳಿತ ಸಂಸ್ಥೆಗಳು ಶೌಚಾಲಯಗಳನ್ನು ನಿರ್ಮಿಸಿದರೆ ತಮ್ಮ ಹೊಣೆಗಾರಿಕೆ ಮುಗಿದಂತೆ ಎಂದು ಭಾವಿಸುತ್ತವೆ. ಬಹುತೇಕ ಶೌಚಾಲಯಗಳಿಗೆ ನೀರಿನ ಸಂಪರ್ಕವನ್ನೇ ಕಲ್ಪಿಸಿರುವುದಿಲ್ಲ. ಒಂದು ವೇಳೆ ಕಲ್ಪಿಸಿದರೂ ಕೆಲವೇ ದಿನಗಳಲ್ಲಿ ಅಲ್ಲಿರುವ ನಲ್ಲಿಗಳನ್ನು ಕದ್ದೊಯ್ಯುವವರಿದ್ದಾರೆ. ಸಾರ್ವಜನಿಕ ವಸ್ತುಗಳನ್ನು ಹಾಳು ಮಾಡುವುದೆಂದರೆ ಕೆಲವರಿಗೆ ವಿಕೃತ ಸಂತೋಷ.

ಪರಿಸ್ಥಿತಿ ಹೀಗಿರುವಾಗ ಪ್ರತಿಯೊಂದು ಶೌಚಾಲಯದ ಉಸ್ತುವಾರಿ ಮತ್ತು ನಿರ್ವಹಣೆಗೆ ಪ್ರತ್ಯೇಕ ವ್ಯವಸ್ಥೆ ಆಗಲೇಬೇಕು. ಶೌಚಾಲಯಗಳ ನಿರ್ವಹಣೆಯೇ ನಮ್ಮ ಪೌರಾಡಳಿತ ಸಂಸ್ಥೆಗಳ ಅತಿ ದೊಡ್ಡ ತೊಡಕು. ಸರಕಾರ ಮನಸ್ಸು ಮಾಡಿದರೆ ಇವುಗಳಿಗೆ ಸುಲಭದಲ್ಲಿಯೇ ಪರಿಹಾರ ಕಂಡು ಕೊಳ್ಳಬಹುದು. ಮೊಟ್ಟ ಮೊದಲು ಸಾರ್ವಜನಿಕ ಶೌಚಾಲಯಗಳು ಉಚಿತವಾಗಿರಬೇಕೆಂಬ ನಮ್ಮ ಧೋರಣೆಯನ್ನು ಬದಲಾಯಿಸಿ ಕೊಳ್ಳಬೇಕು. ಹೋಟೇಲ್‌ಗಳಲ್ಲಿ ವೆಯ್ಟರ್‌ಗಳಿಗೆ, ಪಾರ್ಕಿಂಗ್ ಸ್ಥಳಗಳಲ್ಲಿ ವಾಚ್‌ಮನ್‌ಗಳಿಗೆ ಟಿಪ್ಸ್ ನೀಡಲು ಧಾರಾಳತನ ತೋರಿಸುವ ನಾವು ಅದೇಕೋ ಸಾರ್ವಜನಿಕ ಶೌಚಾಲಯದಲ್ಲಿ ದುಡಿಯುವ ಕಾರ್ಮಿಕನ ವಿಚಾರದಲ್ಲಿ ಈ ಔದಾರ್ಯ ತೋರಿಸುವುದಿಲ್ಲ. ಆತ ಚಿಲ್ಲರೆ ಹಣ ಕೇಳಿದಾಗಲೂ ನಾವು ಒಂದು ಫ್ರೀ ಅಲ್ವಾ ಗದರಿಸುತ್ತೇವೆ.

ನಮ್ಮ ಮಲಮೂತ್ರಗಳ ಬಗ್ಗೆ ನಾವೇ ಅಸಹ್ಯಪಡುವಾಗ ಅನ್ಯರ ಮಲಮೂತ್ರಗಳ ವಾಸನೆ ಸಹಿಸುತ್ತಲೇ ಸಾರ್ವಜನಿಕ ಶೌಚಾಲಯಗಳನ್ನು ಸ್ವಚ್ಛ ಗೊಳಿಸುವ ಕಾರ್ಮಿಕ ಈ ದೇಶದ ಮೊದಲ ಸ್ವಚ್ಛ ರಾಯಭಾರಿ ಎನ್ನುವ ಗೌರವಕ್ಕೆ ಅರ್ಹ. ನಮ್ಮ ಮನಸ್ಸಿನ ಮಲಿನವನ್ನು ತೆಗೆದು ಹಾಕಿ ಆತನನ್ನು ಗೌರವಿಸುವ ಕಾರ್ಯ ಮೊದಲು ಆರಂಭವಾಗಬೇಕು. ಸಾರ್ವಜನಿಕ ಶೌಚಾಲಯಗಳು ಶುಲ್ಕ ರಹಿತವಾಗಿ ಮುಂದುವರಿದರೂ ಇಲ್ಲಿ ಟಿಪ್ಸ್ ಸಂಸ್ಕೃತಿಯನ್ನು ಪ್ರೋತ್ಸಾಹಿಸಬೇಕು. ಟಿಪ್ಸ್ ಜತೆ ಅತಿ ಹೆಚ್ಚಿನ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ಶೌಚಾಲಯಗಳಿಗೆ ಮಾಸಿಕ ರೇಟಿಂಗ್ ನೀಡುವ ವ್ಯವಸ್ಥೆ ಆರಂಭಿಸಬೇಕು. ಶೌಚಾಲಯದ ಹೊರಗೆ ರೇಟಿಂಗ್ ಹೆಚ್ಚಿದಷ್ಟೂ ಅದನ್ನು ಬಳಸುವವರ ಸಂಖ್ಯೆ ಹೆಚ್ಚುವುದು ಸಹಜ.



ಈ ಸ್ಪರ್ಧಾತ್ಮಕತೆ ಮೂಲಕ ಕ್ರಮೇಣ ಶೌಚಾಲಯಗಳ ನಿರ್ವಹಣೆಯನ್ನು ಕಾರ್ಪೋರೇಟ್ ಸಂಸ್ಥೆಗಳ ಹೌಸ್ ಕೀಪಿಂಗ್ ಮಟ್ಟಕ್ಕೇರಿಸಬಹುದು. ವಾರ್ಡ್ ಮಟ್ಟದಲ್ಲಿ ಸಾರ್ವಜನಿಕ ರೆಸ್ಟ್ ರೂಮ್‌ಗಳನ್ನು ಚೆನ್ನಾಗಿ ನಿರ್ವಹಣೆ ಮಾಡಿದವರಿಗೆ ಪ್ರೋತ್ಸಾಹಧನ ನೀಡುವ ಜತೆಗೆ ಅಲ್ಲಿನ ಕಾರ್ಪೋರೇಟರ್‌ಗಳನ್ನು, ಅಧಿಕಾರಿಗಳನ್ನು ವರ್ಷಕ್ಕೊಮ್ಮೆ ಗುರುತಿಸಿ ಗೌರವಿಸುವ ಕೆಲಸ ನಡೆದರೆ ಸ್ಪರ್ಧೆಯ ಮಟ್ಟವನ್ನು ಇನ್ನಷ್ಟು ಏರಿಸಬಹುದು.

ಇಂತಹ ಸ್ಥಳಗಳಲ್ಲಿ ಗೌರವ ಭಾವದಿಂದ ಟಿಪ್ಸ್ ನೀಡುವುದನ್ನು ಒಂದು ಆಂದೋಲನವಾಗಿ ಪ್ರಚಾರ ಮಾಡಬೇಕು. ಅಕ್ಷಯಕುಮಾರ್ ನಟನೆಯ ಪ್ಯಾಡ್‌ಮ್ಯಾನ್ ಚಿತ್ರ ಬಂದ ಬಳಿಕ ಹೆಣ್ಣು ಮಕ್ಕಳು ತಮ್ಮ ಮಾಸಿಕ ಋತುಸ್ರಾವದಲ್ಲಾಗುವ ದೈಹಿಕ ಏರುಪೇರುಗಳ ಬಗ್ಗೆ ಸಾರ್ವಜನಿಕವಾಗಿ ಮಾತನಾಡುವ ವಾತಾವರಣ ಸೃಷ್ಟಿಯಾಗಿರುವುದು ನಮಗೆ ತಿಳಿದ ವಿಚಾರ. ಇಂಥದ್ದೇ ಅಭಿಯಾನ ನಮ್ಮ ಸಾರ್ವಜನಿಕ ಶೌಚಾಲಯಗಳಿಗೂ ಬೇಕಿದೆ. ಮುಖ್ಯವಾಗಿ ಇವುಗಳ ಬಳಕೆ ಬಗ್ಗೆ ಸಾರ್ವಜನಿಕ ತಿಳಿವಳಿಕೆಯನ್ನು ಮೂಡಿಸಬೇಕಾಗಿದೆ. ಕೆಲವರಿಗೆ ಶೌಚಾಲಯ ಪ್ರವೇಶಿಸಬೇಕಾದರೆ ಸಿಗರೇಟ್ ಬೇಕೇ ಬೇಕು. ಉಗುಳುಭಟರಿಗೆ ಗುಟಕಾ ಉಗಿಯಲು ಅದೇ ಸ್ಥಳ ಬೇಕು. ಕೆಲವರಿಗೆ ದೇಹದ ಕೊಳಕನ್ನು ವಿಸರ್ಜಿಸಿದ ಬಳಿಕ ನೀರು ಹಾಕಿ ಫ್ಲಸ್ ಮಾಡುವ ವ್ಯವಧಾನವೂ ಇರುವುದಿಲ್ಲ. ಇಂಥವರನ್ನು ಸಾರ್ವಜನಿಕವಾಗಿ ಖಂಡಿಸುವಂತಾಗಬೇಕು.

ಇವೆಲ್ಲಕ್ಕೂ ಮೊದಲು ಸಾರ್ವಜನಿಕ ಶೌಚಾಲಯ ಎಂದರೆ ನಮ್ಮಲ್ಲಿ ಮೂಡುವ ಚಿತ್ರಣ ಬದಲಾಗಬೇಕಿದೆ. ನಾಲ್ಕು ಗೋಡೆಗಳ ಮಧ್ಯೆ ಒಂದಷ್ಟು ಕಮೋಡ್‌ಗಳನ್ನು ಹಾಕಿದರೆ ಶೌಚಾಲಯ ಸಿದ್ಧ ಎಂಬ ಹಳೆಯ ಸೂತ್ರವನ್ನು ಬಿಟ್ಟು ಕೃಷ್ಣಬೈರೇಗೌಡರು ಪ್ರಸ್ತಾಪಿಸಿದಂತೆ ಇವುಗಳಿಗೆ ಹೊಸ ರೂಪ ಕೊಡಬೇಕಾಗಿದೆ. ಸಾರ್ವಜನಿಕ ಶೌಚಾಲಯಗಳೂ ಕೂಡ ಮಾಲ್‌ಗಳಲ್ಲಿ, ಹೈಟೆಕ್ ಚಿತ್ರಮಂದಿರ ಗಳಲ್ಲಿ ಕಾಣುವ ರೆಸ್ಟ್ ರೂಮ್‌ಗಳ ಮಾದರಿಯಲ್ಲಿ ಇರಬೇಕು. ಇವುಗಳ ಒಳಹೊಕ್ಕಾಗ ಮೂಡುವ ಅನುಭೂತಿಯೇ ನಮ್ಮನ್ನು ಸ್ವಚ್ಛತೆಗೆ ಪ್ರೇರೇಪಿಸುವಂತಿರಬೇಕು. ನಮ್ಮ ಮನೆಯ ಸ್ನಾನಗೃಹಗಳಿಗೂ ಇವುಗಳಿಗೂ ಇರುವ ವ್ಯತ್ಯಾಸದ ಗೆರೆ ಅಳಿದು ಹೋದರೆ ಸ್ವಚ್ಛತೆಯ ಹೊಸ ಸಂಸ್ಕೃತಿಯೊಂದು ಹುಟ್ಟಿಕೊಳ್ಳಲು ಸಾಧ್ಯವಿದೆ.

ಸರಕಾರದ ಅನುದಾನವಿಲ್ಲದೆ ಶೌಚಾಲಯಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ನೀಡಲು ಸಾಕಷ್ಟು ಮಾರ್ಗಗಳಿವೆ. ನಗರಗಳಲ್ಲಿ ಶೌಚಾಲಯಗಳು ಸಾರ್ವಜನಿಕರಿಗೆ ಮಾತ್ರವಲ್ಲ, ಸುತ್ತ ಮುತ್ತಲ ವ್ಯಾಪಾರಸ್ಥರಿಗೆ ಅಗತ್ಯವಿದೆ. ಸ್ಥಳೀಯ ವ್ಯಾಪಾರಿಗಳಿಗೆ ಆಯಾ ಪ್ರದೇಶದ ಶೌಚಾಲಯವನ್ನು ದತ್ತು ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸಬಹುದು. ಶೌಚಾಲಯಗಳ ನಿರ್ವಹಣೆಗೆ ಮುಂದೆ ಬರುವ ಕಂಪನಿಗಳಿಗೆ ತೆರಿಗೆ ವಿನಾಯಿತಿಯಂತಹ ಪ್ರೋತ್ಸಾಹ ನೀಡಬಹುದು. ಆಯಾ ಕಂಪನಿಗಳ ಜಾಹೀರಾತನ್ನು ಇಲ್ಲಿ ಪ್ರದರ್ಶಿಸಬಹುದು. ಅವುಗಳ ಸಿಎಸ್‌ಆರ್ ಫಂಡ್‌ನಿಂದ ಹಣ ಪಡೆಯ ಬಹುದು.

ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಗೆ ನೀರನ್ನು ಒದಗಿಸುವುದು ಸವಾಲಿನ ಕೆಲಸ. ಆದರೆ ಬೆಂಗಳೂರಿನ ಸಾವಿರಾರು ಸ್ವಚ್ಛ ನೀರಿನ ಘಟಕಗಳಲ್ಲಿ ಸಂಸ್ಕರಣೆ ರೂಪದಲ್ಲಿ ಲಕ್ಷಗಟ್ಟಲೆ ಲೀಟರ್ ನೀರು ಪ್ರತಿದಿನ ವ್ಯರ್ಥವಾಗಿ ಚರಂಡಿ ಸೇರುತ್ತದೆ. ಈ ನೀರನ್ನು ಸಾರ್ವಜನಿಕ ಶೌಚಾಲಯಗಳಲ್ಲಿ ಬಳಸಿಕೊಳ್ಳುವ ವ್ಯವಸ್ಥೆ ಮಾಡಬಹುದು. ಒಳಚರಂಡಿ ವ್ಯವಸ್ಥೆ ಇಲ್ಲದ ಪ್ರದೇಶಗಳಿಗಾಗಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ವಿಶೇಷ ತಂತ್ರಜ್ಞಾನ ರೂಪಿಸಿದೆ.

ಅನರೋಬಿಕ್ ಬ್ಯಾಕ್ಟೀರಿಯಾಗಳ ಮೂಲಕ ಮಾನವ ತ್ಯಾಜ್ಯವನ್ನು ನೀರು ಮತ್ತು ಅನಿಲವಾಗಿ ವಿಲೇವಾರಿ ಮಾಡುವ ಈ ತಂತ್ರಜ್ಞಾನದಿಂದ ದುರ್ವಾಸನೆಯೂ ದೂರವಾಗುತ್ತದೆ. ಈಗಾಗಲೇ ರೈಲ್ವೆ ಕೋಚ್‌ಗಳಲ್ಲಿ ಇದನ್ನು ಯಶಸ್ವಿಯಾಗಿ ಬಳಸಲಾಗುತ್ತಿದೆ.

ಕೆಲ ವರ್ಷಗಳ ಹಿಂದೆ ಬೆಂಗಳೂರು ಮತ್ತು ಮೈಸೂರಿನಲ್ಲಿ ಇ-ಶೌಚಾಲಯಗಳನ್ನು ಪ್ರಾಯೋಗಿಕವಾಗಿ ಜಾರಿಗೆ ತರಲಾಗಿತ್ತು. ನಾಣ್ಯ ಹಾಕಿ ಒಳ ಪ್ರವೇಶಿಸುವ ಮತ್ತು ಬಳಕೆ ಮುಗಿದ ನಂತರ ತಾನಾಗಿಯೇ ಫ್ಲಶ್ ಆಗುವ ವ್ಯವಸ್ಥೆ ಇದರಲ್ಲಿತ್ತು. ಬಳಕೆಯ ನಂತರ ನೆಲವನ್ನು ತಾನಾಗಿಯೇ ಶುಚಿಗೊಳಿಸುವ ಸೆನ್ಸಾರ್‌ಗಳು ಈ ಯಂತ್ರದಲ್ಲಿದ್ದವು. ಆದರೆ ಅಧಿಕಾರಿಗಳ ಬೇಜವಾಬ್ದಾರಿಯಿಂದ ಎರಡೂ ನಗರಗಳಲ್ಲಿ ಈ ವ್ಯವಸ್ಥೆ ವಿಫಲವಾಯಿತು.

ಮೈಸೂರಿನಲ್ಲಿ ಬಸ್ ತಂಗುದಾಣಗಳಿಗೆ ಹೊಂದಿಕೊಂಡು ಇವುಗಳನ್ನು ಇಡಲಾಗಿತ್ತು. ಸ್ವಲ್ಪವೂ ಖಾಸಗಿತನವಿಲ್ಲದ ಸಾರ್ವಜನಿಕವಾಗಿ ಶೌಚಪೆಟ್ಟಿಗೆಯೊಳಗೆ ಪ್ರವೇಶಿಸಲು ಸಾರ್ವಜನಿಕರು ವಿಶೇಷವಾಗಿ ಮಹಿಳೆಯರು ಹಿಂದೇಟು ಹಾಕುತ್ತಿದ್ದರು. ಆರಂಭದ ಒಂದೆರಡು ತಿಂಗಳು ಇ-ಶೌಚಾಲಯಕ್ಕೆ ನೀರಿನ ಪೂರೈಕೆ ವ್ಯವಸ್ಥೆ ಮಾಡಿದ ಪಾಲಿಕೆ ಬಳಿಕ ನಿರ್ವಹಣೆ ಮಾಡಲೇ ಇಲ್ಲ. ವರ್ಷ ಕಳೆಯುವುದರೊಳಗೆ ಶೌಚಾಲಯಗಳ ಮೇಲಿದ್ದ ಟ್ಯಾಂಕ್‌ಗಳು ಕಾಣೆಯಾದವು. ಕ್ರಮೇಣ ಈ ಶೌಚಾಲಯಗಳೂ ನಾಪತ್ತೆಯಾದವು. ಈ ನೆಪದಲ್ಲಿ ಸಾರ್ವಜನಿಕರ ಹತ್ತಾರು ಕೋಟಿ ರು. ತೆರಿಗೆ ಹಣ ಖರ್ಚಾಗಿದ್ದೇ ಬಂತು.

ತಂತ್ರಜ್ಞಾನ ಸ್ನೇಹಿಯಾದ ಯಾವುದೇ ಹೊಸ ವ್ಯವಸ್ಥೆ ಜಾರಿ ಮಾಡಿದರೂ ಅದನ್ನು ಗುಜರಿಗೆ ತಳ್ಳುವಲ್ಲಿ ನಮ್ಮ ಅಧಿಕಾರಿಗಳು ನಿಸ್ಸೀಮರು. ಪಬ್ಲಿಕ್ ರೆಸ್ಟ್ ರೂಮ್ ಕಲ್ಪನೆ ಯಶಸ್ವಿಯಾಗ ಬೇಕಾದರೆ ಅದರ ನಿರ್ವಹಣೆಯಲ್ಲಿ ಸರಕಾರದ ಪಾತ್ರ ಅತ್ಯಂತ ಕಡಿಮೆ ಇರಬೇಕು. ಜನಸಹಭಾಗಿತ್ವದಿಂದಷ್ಟೇ ಈ ಮಾದರಿ ಯಶಸ್ವಿಯಾಗಬಹುದು. ಕೃಷ್ಣಬೈರೇಗೌಡರು ತಮ್ಮ ಕಲ್ಪನೆಯ ಮಾದರಿ ಶೌಚಾಲಯಗಳ ನಿರ್ಮಾಣಕ್ಕೆ ಮುಂದಾಗುವ ಮುನ್ನ ಅವುಗಳ ಮುಂದಿನ ನಿರ್ವಹಣೆ ಬಗ್ಗೆ ಹೆಚ್ಚು ಒತ್ತು ನೀಡಬೇಕಾಗುತ್ತದೆ.

**- ಲೋಕೇಶ್** ಕಾಯರ್ಗ

## ಗೋಡೆಗಳಲ್ಲಿ ದಪ್ಪಕ್ಷರಗಳಲ್ಲಿ ಬರೆದಿರುವುದನ್ನು ಕಾಣಬಹುದು

- ಜನ ಈ ಬೋರ್ಡ್ ನೋಡಿಕೊಂಡೇ ಅಲ್ಲಿಯೇ ತಮ್ಮ ಪ್ರಕೃತಿ ಭಾದೆಯನ್ನು ತೀರಿಸಿಕೊಳ್ಳುವುದು ಸಾಮಾನ್ಯ.
- ಸಾಂಸ್ಕೃತಿಕ ನಗರಿ ಮೈಸೂರಿನ ಬಸ್ ನಿಲ್ದಾಣದ ಸಮೀಪ ಕೆಲ ತಿಂಗಳ ಹಿಂದೆ ಇಂತಹ ಸ್ಥಳವೊಂದರಲ್ಲಿ ಕನ್ನಡಿಯನ್ನೇ ತಡೆಗೋಡೆಯಾಗಿ ಮಾಡಿ ಮೂತ್ರದಾನಿಗಳನ್ನು ದೂರವಿಡುವ ಪ್ರಯತ್ನ ಮಾಡಲಾಗಿತ್ತು.
- ನಂತರ ಅದೇ ಸ್ಥಳದಲ್ಲಿ ಕನ್ನಡಿ ನೋಡಿಕೊಂಡೇ ಮೂತ್ರಿಸುವವರ ಚಿತ್ರಗಳು ಪ್ರಕಟವಾಗಿದ್ದವು.
- ನಿಸರ್ಗದ ತುರ್ತು ಕರೆ ಬಂದಾಗ ಮನುಷ್ಯನೂ ಪ್ರಾಣಿಯಾಗುತ್ತಾನೆ.
- ಸ್ಥಳ, ಸಂದರ್ಭ, ಸನ್ನಿವೇಶ ಎಲ್ಲವನ್ನೂ ಮರೆತು ಎಲ್ಲೋ ಮೂಲೆ ಜಾಗವನ್ನು ಹುಡುಕಿ ತನ್ನ ದೇಹಬಾಧೆಯನ್ನು ತೀರಿಸಿ ಕೊಳ್ಳುತ್ತಾನೆ. ಇದು ತಪ್ಪೆನ್ನುವುದು ಆತನಿಗೂ ಗೊತ್ತು.
- ಸಾರ್ವಜನಿಕವಾಗಿ ಮೂತ್ರಿಸುವುದು ತಪ್ಪೆನ್ನುವವರು ಅಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಶೌಚಾಲಯ/ ಮೂತ್ರಾಲಯಗಳನ್ನು ನಿರ್ಮಾಣ ಮಾಡಬೇಕೆಂದು ಹೇಳುವುದಿಲ್ಲ. ಇದು ನಮ್ಮ ವೈರುಧ್ಯ.
- ಹಾಗೆಂದು ಸಾರ್ವಜನಿಕರ ದುಡ್ಡಿನಲ್ಲಿ ನಿರ್ಮಾಣವಾದ ಶೌಚಾಲಯಗಳಿಗೆ ಕೊರತೆ ಇಲ್ಲ. ಆದರೆ ಒಂದು ವರ್ಷ ಕಳೆಯುವುದರೊಳಗೆ ಅವು ಪಾಲು ಬೀಳುವುದೂ ಸಹಜ ಪ್ರಕ್ರಿಯೆಯಾಗಿದೆ.
- ಸ್ಥಳೀಯಾಡಳಿತ ಸಂಸ್ಥೆಗಳು ಶೌಚಾಲಯಗಳನ್ನು ನಿರ್ಮಿಸಿದರೆ ತಮ್ಮ ಹೊಣೆಗಾರಿಕೆ ಮುಗಿದಂತೆ ಎಂದು ಭಾವಿಸುತ್ತವೆ.
- ಬಹುತೇಕ ಶೌಚಾಲಯಗಳಿಗೆ ನೀರಿನ ಸಂಪರ್ಕವನ್ನೇ ಕಲ್ಪಿಸಿರುವುದಿಲ್ಲ.
- ಒಂದು ವೇಳೆ ಕಲ್ಪಿಸಿದರೂ ಕೆಲವೇ ದಿನಗಳಲ್ಲಿ ಅಲ್ಲಿರುವ ನಲ್ಲಿಗಳನ್ನು ಕದ್ದೊಯ್ಯುವವರಿದ್ದಾರೆ.
- ಸಾರ್ವಜನಿಕ ವಸ್ತುಗಳನ್ನು ಹಾಳು ಮಾಡುವುದೆಂದರೆ ಕೆಲವರಿಗೆ ವಿಕೃತ ಸಂತೋಷ.

# ಯೋಗ, ಧ್ಯಾನದಿಂದ ಆರೋಗ್ಯ ವೃದ್ಧಿ

## ಆ.9 ರಂದು ಧ್ಯಾನ ಯಜ್ಞ - ಸಮಗ್ರ ಸ್ವಾಸ್ಥ್ಯ ಕಾರ್ಯಕ್ರಮ

• ಪ್ರಜೋದಯ ವರದಿ



**ಅರಸೀಕೆರೆ:** ಯೋಗ ಮತ್ತು ಧ್ಯಾನವು ನಮ್ಮ ಹಿರಿಯರು ನೀಡಿರುವ ಅಮೂಲ್ಯ ಜೀವನ ಪದ್ಧತಿಯಾಗಿದ್ದು, ಅದನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡರೆ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಪಿಎಸ್‌ಎಸ್‌ಎಮ್ ಹಾಗೂ ಮಹಾವತಾರ್ ಫೌಂಡೇಶನ್‌ನ ಯಶೋಧ ಅವರು ಹೇಳಿದರು.

ನಗರದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಗಸ್ಟ್ 9 ರಂದು ಶ್ರೀ ವೀರಶೈವ ಸಮುದಾಯ ಭವನದಲ್ಲಿ ಧ್ಯಾನ ಯಜ್ಞ ಹಾಗೂ ಸಮಗ್ರ ಸ್ವಾಸ್ಥ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಅವರು ಮನವಿ ಮಾಡಿದರು.

ದೇಹಕ್ಕೆ ವ್ಯಾಯಾಮ ಎಷ್ಟು ಅಗತ್ಯವೋ, ಮನಸ್ಸಿಗೆ ಧ್ಯಾನವೂ ಅಷ್ಟೇ ಅಗತ್ಯವಾಗಿದೆ. ಒತ್ತಡರಹಿತ ಜೀವನ, ಆತ್ಮಸಾಕ್ಷಾತ್ಕಾರ ಹಾಗೂ ಆತ್ಮವಿಕಾಸಕ್ಕೆ ಧ್ಯಾನ ಸಹಕಾರಿಯಾಗುತ್ತದೆ. ಋಷಿಮುನಿಗಳು ನೀಡಿರುವ ಸಮಗ್ರ ಜೀವನ ಪದ್ಧತಿ, ನೈಸರ್ಗಿಕ ಚಿಕಿತ್ಸಾ ವಿಧಾನಗಳು ಹಾಗೂ ಧ್ಯಾನದ ಅಭ್ಯಾಸವು ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಗೆ ಪೂರಕವಾಗಿವೆ ಎಂದು ತಿಳಿಸಿದರು.

ಕಾರ್ಯಕ್ರಮವು ಬೆಳಗ್ಗೆ 5 ಗಂಟೆಗೆ ಆರಂಭವಾಗಲಿದ್ದು, ಕ್ರಿಯಾಯೋಗ ಅಭ್ಯಾಸ, ಸಂಗೀತದೊಂದಿಗೆ ಧ್ಯಾನ, ಅಗ್ನಿಹೋತ್ರದ ಪ್ರಾತ್ಯಕ್ಷಿಕೆ ಹಾಗೂ ಅದರ ಪ್ರಯೋಜನಗಳ ಕುರಿತು ಮಾಹಿತಿ, ಸಾತ್ವಿಕ ಉಪಾಹಾರ, ಮಹಾವತಾರ್ ಫೌಂಡೇಶನ್‌ನ ಪಯಣ, ಆಧ್ಯಾತ್ಮಿಕ ಸಂದೇಶ ಹಾಗೂ ಅನುಭವ ಹಂಚಿಕೆ, ಸಂಗೀತ ಧ್ಯಾನ, ಸಾತ್ವಿಕ ಅನ್ನಪ್ರಸಾದ, ಶಿವಾಂಬು ಚಿಕಿತ್ಸೆಯ ಮಾಹಿತಿ, ಮನೆ ಮದ್ದುಗಳ ಪರಿಚಯ, ಆಧ್ಯಾತ್ಮಿಕ ಕೃಷಿ, ಔಷಧ ಮುಕ್ತ ಜೀವನಶೈಲಿ, ಮುದ್ರಾ ಚಿಕಿತ್ಸೆ ಹಾಗೂ ಸಮಾರೋಪ ಸಮಾರಂಭ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ದೊಡ್ಡಗುಣಿ ಮಠದ ರೇವಣಸಿದ್ದೇಶ್ವರ ಸ್ವಾಮೀಜಿ, ಸಚಿವ ಕೆ.ಎಂ.ಶಿವಲಿಂಗೇಗೌಡ, ಉಡುಪಿಯ ಶಿವಾಂಬು ತಜ್ಞೆ ಸುಲೋಚನಾ ಕೊಡವೂರು, ಇಂದ್ರಪ್ರಸ್ಥ ಆರ್ಗಾನಿಕ್‌ನ ಚಂದ್ರಶೇಖರ್ ಹಾಗೂ ಮಹಾವತಾರ್ ಫೌಂಡೇಶನ್ ಸಂಸ್ಥಾಪಕ ಮಾಸ್ಟರ್ ರಂಗನಾಥ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಫೌಂಡೇಶನ್‌ನ ಈರಣ್ಣ, ನಳಿನಿ, ಶಿವಗಂಗಾ, ಯೋಗೀಶ, ಮಂಜುನಾಥ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು

# ಎಸ್‌ಐಆರ್: ಶೇ.89.24 ಗಣಕೀಕರಣ

**ಹಾಸನ:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಹಿನ್ನಲೆಯಲ್ಲಿ ವಿತರಣೆ ಮಾಡಿ ಹಿಂಪಡೆದ ಗಣತಿ ನಮೂನೆಗಳ ಗಣಕೀಕರಣ ಶೇಕಡ 89.24 ಪ್ರಗತಿ ಸಾಧಿಸಿದ್ದು, ಒಟ್ಟು 13,76,727 ಮತದಾರರ ವಿವರಗಳನ್ನು ತಂತ್ರಾಂಶದಲ್ಲಿ ನಮೂದಿಸಲಾಗಿರುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಹೆಚ್.ಕೆ.ಕೃಷ್ಣಮೂರ್ತಿ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಸಂಗ್ರಹಿಸಲಾಗದ ಗಣತಿ ನಮೂನೆಗಳು ವಿವರವನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಹಸ್ತಾಂತರಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಒಟ್ಟು 1,66,075 ಸಂಗ್ರಹಿಸಲಾಗದ ಗಣತಿ ನಮೂನೆಗಳು (Uncollectable Enumeration Forms) ಎಂದು ಗುರುತಿಸಲಾಗಿದೆ ಎಂದರು.

51,824 ಮರಣ ಹೊಂದಿರುವ, 72,396 ಶಾಶ್ವತ ವಲಸೆ, 13,234 ಪುನರಾವರ್ತನೆ, 25,268 ಗೈರು ಮತದಾರರು ಮತ್ತು 3,353 ಇತರೆ ಕಾರಣಗಳು) ಎಂದು ನಮೂದಿಸಲಾಗಿರುತ್ತದೆ ಎಂದರು ತಿಳಿಸಿದರು.

2002 ರ ಮತದಾರರ ಪಟ್ಟಿಯಿಂದ 6,46,645 ಮತದಾರರು ಸ್ವಯಂ ಮ್ಯಾಪಿಂಗ್ 6,94,866 ಮತದಾರರು ಸಂತತಿ ಮ್ಯಾಪಿಂಗ್ ಹಾಗೂ 34,956 ಮತದಾರರು ಯಾವುದೇ ಮ್ಯಾಪಿಂಗ್ ಆಗದ ವಿಧಗಳಾಗಿ ವಿಂಗಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಬಹುಜನ ಸಮಾಜ ಪಾರ್ಟಿಯಿಂದ ಗಂಗಾಧರ್ ಬಹುಜನ್, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಹೆಚ್.ಆರ್.ನವೀನ್‌ಕುಮಾರ್, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅವಿನಾಶ್ ಜನತಾದಳ (ಎಸ್) ನ ಎಸ್.ದ್ಯಾವೇಗೌಡ ಹಾಗೂ ಬಿಜೆಪಿಯಿಂದ ಕೆ.ಎನ್.ಶರತ್, ಆಮ್ ಆದ್ಮಿ ಪಕ್ಷದಿಂದ ಆಗಿಲೆ ಯೋಗೇಶ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.



# ಸ್ವಾತಂತ್ರ್ಯ ದಿನಾಚರಣೆ: ಅಗತ್ಯ ಸಿದ್ಧತೆಗೆ ಸೂಚನೆ

**ಹಾಸನ:** ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಯಾವುದೇ ಲೋಪಗಳಿಲ್ಲದಂತೆ, ಅರ್ಥಪೂರ್ಣ ಹಾಗೂ ಅಚ್ಚುಕಟ್ಟಾಗಿ ನಡೆಸುವ ನಿಟ್ಟಿನಲ್ಲಿ ಅಗತ್ಯ ಸಿದ್ಧತೆಗೆ ಕ್ರಮ ವಹಿಸಲು ಅಪರ ಜಿಲ್ಲಾಧಿಕಾರಿ ಹೆಚ್.ಕೆ. ಕೃಷ್ಣಮೂರ್ತಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಆ.15 ರಂದು ಬೆಳಿಗ್ಗೆ 8 ಗಂಟೆಯೊಳಗೆ ತಮ್ಮ ಕಚೇರಿಗಳಲ್ಲಿ ಧ್ವಜಾರೋಹಣ ನೆರವೇರಿಸಿ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಲು ಸೂಚಿಸಿದರು.

ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧೀಜಿ ಅವರ ಭಾವಚಿತ್ರದೊಂದಿಗೆ ಸಂವಿಧಾನ ಪಿತಾಮಹ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವ ಚಿತ್ರವನ್ನು ಇರಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರಲ್ಲದೆ, ಎಲ್ಲಾ ಸರ್ಕಾರಿ ಕಟ್ಟಡಗಳಲ್ಲಿ ಆ.14, 15 ರಂದು ವಿದ್ಯುತ್ ದೀಪಾಲಂಕಾರ ಮಾಡುವಂತೆ ಸೂಚಿಸಿದರು.

# ಹೇಮಾವತಿ ನದಿಯಲ್ಲಿ ನೀರು ನಾಯಿಗಳು ಪ್ರತ್ಯಕ್ಷ



• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಹರಿಯುತ್ತಿರುವ ಹೇಮಾವತಿ ನದಿಯಲ್ಲಿ ಅಪರೂಪವಾಗಿ ಕಾಣಿಸಿಕೊಳ್ಳುವ ನೀರು ನಾಯಿಗಳು (ಒಟ್ಟರ್‌ಗಳು) ಪ್ರತ್ಯಕ್ಷವಾಗಿದ್ದು, ಸ್ಥಳೀಯರು ಹಾಗೂ ಪ್ರಕೃತಿ ಪ್ರಿಯರ ಗಮನ ಸೆಳೆದಿವೆ. ಸ್ವಚ್ಛ ಜಲಮೂಲ ಮತ್ತು ಸಮೃದ್ಧ ಜೈವಿಕ ವೈವಿಧ್ಯತೆಯ ಸಂಕೇತವಾಗಿ ಈ ಬೆಳವಣಿಗೆಯನ್ನು ಪರಿಸರಾಸಕ್ತರು ಪರಿಗಣಿಸಿದ್ದಾರೆ.

ಇತ್ತೀಚೆಗೆ ಹೇಮಾವತಿ ನದಿಯ ಒಂದು ಭಾಗದಲ್ಲಿ ನೀರು ನಾಯಿಗಳ ಗುಂಪು ನೀರಿನಲ್ಲಿ ಆಟವಾಡುತ್ತಾ ಹಾಗೂ ಆಹಾರ ಅರಸುತ್ತಾ ಸಂಚರಿಸುತ್ತಿರುವ ದೃಶ್ಯ ಸ್ಥಳೀಯರ ಕಣ್ಣಿಗೆ ಬಿದ್ದಿದೆ. ಈ ಅಪರೂಪದ ದೃಶ್ಯವನ್ನು ಕೆಲವರು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದು, ಸಾಮಾಜಿಕ ಜಾಲತಾಣಗಳಲ್ಲೂ ವ್ಯಾಪಕವಾಗಿ ಹರಿದಾಡುತ್ತಿದೆ.

ನೀರು ನಾಯಿಗಳು ಸಾಮಾನ್ಯವಾಗಿ ಸ್ವಚ್ಛ ನೀರು, ಸಮೃದ್ಧ ಮೀನು ಸಂಪತ್ತು ಹಾಗೂ ಮಾಲಿನ್ಯರಹಿತ ಪರಿಸರ ಇರುವ ನದಿ ಮತ್ತು ಜಲಮೂಲಗಳಲ್ಲಿ ಮಾತ್ರ ವಾಸಿಸುತ್ತವೆ. ಹೀಗಾಗಿ ಪಟ್ಟಣದ ಹೇಮಾವತಿ ಸೇತುವೆಯ ಅಡಿಯಲ್ಲಿ ಅವು ಕಾಣಿಸಿಕೊಂಡಿರುವುದು ಅಲ್ಲಿನ ಪರಿಸರ ವ್ಯವಸ್ಥೆ ಇನ್ನೂ ಉತ್ತಮ ಸ್ಥಿತಿಯಲ್ಲಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಪರಿಸರಾಸಕ್ತರು ತಿಳಿಸಿದ್ದಾರೆ.

ಅಕ್ರಮ ಬೇಟೆ, ನದಿ ಮಾಲಿನ್ಯ, ಅಕ್ರಮ ಮರಳು ಗಣಿಗಾರಿಕೆ ಹಾಗೂ ನೈಸರ್ಗಿಕ ಆವಾಸಗಳ ನಾಶದಿಂದ ದೇಶದ ಹಲವು ಭಾಗಗಳಲ್ಲಿ ನೀರು ನಾಯಿಗಳ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ನೀರು ನಾಯಿಗಳಿಗೆ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಕಾನೂನುಬದ್ಧ ರಕ್ಷಣೆ ನೀಡಿದೆ.

## ಆ.10- 11 ರಂದು ಹೈನುಗಾರಿಕೆ ಸಾಕಾಣಿಕೆ ತರಬೇತಿ

**ಹಾಸನ:** ಜಿಲ್ಲೆಯ ರೈತರಿಗೆ, ರೈತ ಮಹಿಳೆಯರಿಗೆ ಹಾಗೂ ಆಸಕ್ತಿಯುಳ್ಳ ಎಲ್ಲರಿಗೂ ಪಶು ಪಾಲನಾ ಇಲಾಖೆಯ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರವತಿಯಿಂದ ರೈತರಿಗೆ ಆಧುನಿಕ ಹೈನುಗಾರಿಕೆ ಸಾಕಣಿಕೆ ತರಬೇತಿಯನ್ನು ಆ.10 ಮತ್ತು 11 ರಂದು ಏರ್ಪಡಿಸಲಾಗಿದೆ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದ ಉಪ ನಿರ್ದೇಶಕರು ತಿಳಿಸಿದ್ದಾರೆ.

ತರಬೇತಿಯಲ್ಲಿ ಭಾಗವಹಿಸುವ ಶಿಭಿರಾರ್ಥಿಗಳಿಗೆ ಯಾವುದೇ ಪ್ರಯಾಣ ಭತ್ಯೆ ಅಥವಾ ಸ್ಟೈಪಂಡ್ ನೀಡಲಾಗುವುದಿಲ್ಲ, ಆಸಕ್ತಿಯುಳ್ಳವರು ತರಬೇತಿ ಪ್ರಾರಂಭವಾಗುವ ದಿನಾಂಕದಂದು ಬೆಳಿಗ್ಗೆ 10.30 ಗಂಟೆಯೊಳಗೆ ಹಾಜರಾಗಬೇಕೆಂದು ಸೂಚಿಸಲಾಗಿದೆ, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08172-235226 ಗೆ ಸಂಪರ್ಕಿಸಬಹುದಾಗಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವಕರು ಸಮಾಜಮುಖಿ ಕಾರ್ಯಗಳಲ್ಲಿ ಭಾಗಿಯಾಗಿ

• ಪ್ರಜೋದಯ ವರದಿ

**ಶಾಂತಿಗ್ರಾಮ:** ಇಂದಿನ ಯುವ ಪೀಳಿಗೆ ಸಮಾಜಮುಖಿ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಹಿಂದುಳಿದ ಸಮಾಜವನ್ನು ಅಭಿವೃದ್ಧಿಯ ಮುಂಚೂಣಿಗೆ ತರಲು ಶ್ರಮಿಸಬೇಕು ಎಂದು ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಜಂಟಿ ಆಯುಕ್ತರು ಹಾಗೂ ರಾಜ್ಯ ದೇವಾಂಗ ಸಂಘದ ಗೌರವಾಧ್ಯಕ್ಷ ಜಿ.ಆರ್. ಮಂಜೇಶ್ ಕರೆ ನೀಡಿದರು.

ಶಾಂತಿಗ್ರಾಮ ದೇವಾಂಗ ಸಂಘದ ವತಿಯಿಂದ ದೇವಾಂಗ ಸಮುದಾಯ ಭವನದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ತಾವು ಸರ್ಕಾರಿ ಸೇವೆಯಲ್ಲಿದ್ದಾಗಲೂ ಹಾಗೂ ನಿವೃತ್ತಿಯ ನಂತರವೂ ಸಮಾಜಮುಖಿ ಕಾರ್ಯಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವುದಾಗಿ ತಿಳಿಸಿದ ಅವರು, ಸಮಾಜದ ಅಭಿವೃದ್ಧಿಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕೆಂದು ಯುವ ಜನತೆಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮತ್ತೋರ್ವ



ಸನ್ಮಾನಿತ ಅತಿಥಿ ಹಾಗೂ ರಾಜ್ಯ ದೇವಾಂಗ ಸಂಘದ ಉಪಾಧ್ಯಕ್ಷ ಎಸ್.ಸಿ.ಸತೀಶ್ ಅವರು ಮಾತನಾಡಿ, ತಮ್ಮನ್ನು ಗೌರವಿಸಿ ಸನ್ಮಾನಿಸಿದ ಶಾಂತಿಗ್ರಾಮ ದೇವಾಂಗ ಸಂಘದ ಪದಾಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು. ದೇವಾಂಗ ಸಮುದಾಯದ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಿ, ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಶಿಕ್ಷಣ ಮತ್ತು ಅಭಿವೃದ್ಧಿಗೆ ನೆರವಾಗುವಂತೆ ಕರೆ ನೀಡಿದರು.

ಶಾಂತಿಗ್ರಾಮ ದೇವಾಂಗ ಸಂಘದ ವತಿಯಿಂದ ಜಿ.ಆರ್.ಮಂಜೇಶ್ ಅವರನ್ನು ಸರ್ಕಾರಿ ಸೇವೆಯಲ್ಲಿದ್ದಾಗ ಹಾಗೂ ನಿವೃತ್ತಿಯ ನಂತರ ಸಮಾಜಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಸನ್ಮಾನಿಸಲಾಯಿತು. ಇದೇ ವೇಳೆ, ಶಾಂತಿಗ್ರಾಮ ದೇವಾಂಗ ಸಮುದಾಯ ಭವನ ನಿರ್ಮಾಣದ ರೂವಾರಿಯಾಗಿ ಸೇವೆ ಸಲ್ಲಿಸಿದ ರಾಜ್ಯ ದೇವಾಂಗ ಸಂಘದ ಉಪಾಧ್ಯಕ್ಷ ಎಸ್.ಸಿ.ಸತೀಶ್ ಅವರನ್ನೂ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಜಿ.ವಿ.ಸುಬ್ರಹ್ಮಣ್ಯ ಅವರು ವಹಿಸಿದ್ದರು.

# ಜನಪರ ನೀತಿ: ಸರ್ಕಾರದ ನೀತಿಯಲ್ಲಿ ಬದಲಾವಣೆ ಅಗತ್ಯ

• ಪ್ರಜೋದಯ ವರದಿ

**ಸಕಲೇಶಪುರ:** ದೇಶ ಮತ್ತು ರಾಜ್ಯದಲ್ಲಿ ಜನಪರ ನೀತಿಗಳನ್ನು ಜಾರಿಗೆ ತರಲು ಸರ್ಕಾರದ ನೀತಿಯಲ್ಲಿ ಬದಲಾವಣೆ ಅಗತ್ಯವಾಗಿದೆ ಎಂದು ಸಿಪಿಐ ಜಿಲ್ಲಾ ಮಂಡಳಿ ಸದಸ್ಯ ಎಂ.ಸಿ. ಡೋಂಗ್ರೆ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಹಾಗೂ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ರಾಜ್ಯದ ಮೂಲಭೂತ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಕಲ್ಪಿಸುವಲ್ಲಿ ವಿಫಲವಾಗಿವೆ. ಭೂ ಸುಧಾರಣಾ ಕಾಯ್ದೆಗೆ ಹಿಂದಿನ ಬಿಜೆಪಿ ಸರ್ಕಾರ ತಂದಿದ್ದ ತಿದ್ದುಪಡಿಗಳನ್ನು ಅಧಿಕಾರಕ್ಕೆ ಬಂದ ಬಳಿಕ ಹಿಂಪಡೆಯುವುದಾಗಿ ಕಾಂಗ್ರೆಸ್ ಭರವಸೆ ನೀಡಿದ್ದರೂ ಅದು ಈಡೇರಿಲ್ಲ ಎಂದು ಹೇಳಿದರಲ್ಲದೆ, ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ, ರೈತರಿಗೆ ಗುಣಮಟ್ಟದ ಬೀಜ ಮತ್ತು ಗೊಬ್ಬರ ಪೂರೈಕೆ ಸೇರಿದಂತೆ ಹಲವು ಪ್ರಮುಖ ಬೇಡಿಕೆಗಳು ಇನ್ನೂ ಈಡೇರಿಲ್ಲ ಎಂದು ತಿಳಿಸಿದರು.

ರಾಜ್ಯದಲ್ಲಿ ಕಳಪೆ ಬೀಜ ಹಾಗೂ ಕಳಪೆ ಗೊಬ್ಬರ ಮಾರಾಟ ವ್ಯಾಪಕವಾಗಿದ್ದು, ರೈತರಿಗೆ ಸರ್ಕಾರವೇ ನೇರವಾಗಿ ಗುಣಮಟ್ಟದ ಬೀಜ ಮತ್ತು ಗೊಬ್ಬರ ವಿತರಿಸಬೇಕು ಎಂದು ಆಗ್ರಹಿಸಿದರಲ್ಲದೆ, ನಿರುದ್ಯೋಗ, ಬೆಲೆ ಏರಿಕೆ ಹಾಗೂ ಕೋಮು ಸೌಹಾರ್ದ ಕಾಪಾಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು.

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯಾಗಿದ್ದರೂ ದೇಶದಲ್ಲಿ ಪೆಟ್ರೋಲ್ ದರ ಕಡಿಮೆಯಾಗಿಲ್ಲ. ಇ-20 ಇಂಧನ ನೀತಿಯೂ ಹೊಸ ಗೊಂದಲಕ್ಕೆ ಕಾರಣವಾಗಿದೆ ಎಂದು ಟೀಕಿಸಿದ ಅವರು, ಸರ್ಕಾರದ ನೀತಿಯಲ್ಲಿ ಬದಲಾವಣೆ ಬೇಕು ಎಂಬ ಘೋಷಣೆಯೊಂದಿಗೆ ಆಗಸ್ಟ್ 7ರಿಂದ 14ರವರೆಗೆ ಪಾದಯಾತ್ರೆ ನಡೆಸಲಾಗುತ್ತಿದೆ ಎಂದು ಹೇಳಿದರು.





ಆ.7ರಂದು ಸಕಲೇಶಪುರದಲ್ಲಿ ಪಾದಯಾತ್ರೆಗೆ ಚಾಲನೆ ನೀಡಲಾಗುವುದು. ಆ.10ರಂದು ಬೇಲೂರು ಭಾಗದಲ್ಲಿ ಹಾಗೂ ಆಗಸ್ಟ್ 14ರಂದು ಹಾಸನ ನಗರದಲ್ಲಿ ಸಮಾರೋಪ ಪಾದಯಾತ್ರೆ ನಡೆಯಲಿದೆ. ಸಿಪಿಐ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಸತೀಶ್ ಸುಧೀರ್ ಅವರು ಆ.7ರಂದು ಸಕಲೇಶಪುರದಲ್ಲಿ ನಡೆಯುವ ಪಾದಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸಿಪಿಐ ತಾಲ್ಲೂಕು ಕಾರ್ಯದರ್ಶಿ ಹರೀಶ್ ಮಾತನಾಡಿ, ಅಸ್ಸಾಂ, ಬಿಹಾರ, ಒಡಿಶಾ ಹಾಗೂ ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳಿಂದ ಹಾಸನ ಜಿಲ್ಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಉದ್ಯೋಗಕ್ಕಾಗಿ ಬರುತ್ತಿದ್ದಾರೆ. ಆದರೆ ಅವರ ಮಕ್ಕಳಿಗೆ ಶಿಕ್ಷಣ ಸೇರಿದಂತೆ ಮೂಲಭೂತ ಸೌಲಭ್ಯಗಳು ಸಮರ್ಪಕವಾಗಿ ದೊರೆಯುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಬೇಲೂರು ಸಮೀಪದ ಅರೆಹಳ್ಳಿ ಪ್ರದೇಶದಲ್ಲಿ ಸುಮಾರು ಎರಡು ಸಾವಿರ ವಲಸೆ ಕಾರ್ಮಿಕ ಕುಟುಂಬಗಳು ವಾಸಿಸುತ್ತಿದ್ದು, ಅನೇಕ ಮಕ್ಕಳು ಶಾಲೆಗೆ ಹೋಗದೆ ಮೊಬೈಲ್ ಬಳಕೆಯಲ್ಲೇ ಕಾಲ ಕಳೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ವಲಸೆ ಕಾರ್ಮಿಕರ ಮಕ್ಕಳಿಗೂ ಶಿಕ್ಷಣ ಕಲ್ಪಿಸುವುದು ಸರ್ಕಾರದ ಜವಾಬ್ದಾರಿಯಾಗಿ ಎಂದು ಒತ್ತಾಯಿಸಿದರು.

ಪಾದಯಾತ್ರೆಗೆ ಹಾಸನ ಜಿಲ್ಲೆಯ ಸಾರ್ವಜನಿಕರು, ಕಾರ್ಮಿಕರು, ವಿವಿಧ ಸಂಘಟನೆಗಳು ಬೆಂಬಲ ನೀಡಿ ಯಶಸ್ವಿಗೊಳಿಸುವಂತೆ ಅವರು ಮನವಿ ಮಾಡಿದರು.

# ಎಂ.ಎಸ್ಸಿ.ಯಲ್ಲಿ ಚಿನ್ನದ ಪದಕ ಪಡೆದ ಇಂಪನಾ

• ಪ್ರಜೋದಯ ವರದಿ



**ಹಾಸನ:** ಹೊಳೆನರಸೀಪುರ ತಾಲ್ಲೂಕಿನ ಕುಂಕುಮದ ಹೊಸೂರು ಗ್ರಾಮದ ಕೆ. ಆರ್. ಇಂಪನಾ ಅವರು ಕೃಷಿ ಸೂಕ್ಷ್ಮಜೀವಿಶಾಸ್ತ್ರ ವಿಭಾಗದಲ್ಲಿ ಎಂ.ಎಸ್ಸಿ. (ಅಗ್ರಿ) ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕ ಪಡೆದು ಗ್ರಾಮೀಣ ಪ್ರತಿಭೆಯಾಗಿ ಗುರುತಿಸಿಕೊಂಡಿದ್ದಾರೆ.

ಕಿದ್ವಾಯಿ ಆಸ್ಪತ್ರೆಯ ಉದ್ಯೋಗಿಯಾಗಿರುವ ಕೆ.ಎಂ. ರಾಜಶೇಖರ್ ಹಾಗೂ ಎಂ.ಎಂ. ಜಮುನಾ ದಂಪತಿಯ ಪುತ್ರಿಯಾಗಿರುವ ಇಂಪನಾ, ಬೆಂಗಳೂರಿನ ಯಲಹಂಕದಲ್ಲಿರುವ ಜಿ.ಕೆ.ವಿ.ಕೆ. ಕೃಷಿ ಮಹಾವಿದ್ಯಾಲಯದಲ್ಲಿ ಕೃಷಿ ಸೂಕ್ಷ್ಮಜೀವಿ ಶಾಸ್ತ್ರದಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವದಲ್ಲಿ ಇಂಪನಾ ಅವರಿಗೆ ವಿಶ್ವವಿದ್ಯಾಲಯದ ಚಿನ್ನದ ಪದಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ನಾಟಕ ರಾಜ್ಯಪಾಲ ಥಾವರ್ ಚಂದ್ ಗೆಹಲೋಟ್ ಅವರಿಂದ ಘಟಿಕೋತ್ಸವ ಪ್ರಮಾಣ ಪತ್ರ ಹಾಗೂ ಚಿನ್ನದ ಪದಕವನ್ನು ಸ್ವೀಕರಿಸಿದರು.

ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯ ಸರ್ಕಾರದ ಸಚಿವ ಚೆಲುವರಾಯಸ್ವಾಮಿ, ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿ ಸುರೇಶ್ ಸೇರಿದಂತೆ ಸೆನೆಟ್ ಸದಸ್ಯರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಇಂಪನಾ ಅವರ ಸಾಧನೆಗೆ ಹಾಸನ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಾ.ನಂ. ಲೋಕೇಶ್, ಗ್ರಾಮಸ್ಥರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಕಾಲೇಜಿನ ಆಡಳಿತ ಮಂಡಳಿ, ಸ್ನೇಹಿತರು ಹಾಗೂ ಬಂಧುಗಳು ಅಭಿನಂದನೆ ಸಲ್ಲಿಸಿದ್ದಾರೆ.

# ಹತ್ತಿಗಿಡ ಓಣಿ ಒತ್ತುವರಿ ರಸ್ತೆ ತೆರವು

• ಪ್ರಜೋದಯ ವರದಿ



**ಆಲೂರು:** ತಾಲ್ಲೂಕಿನ ಭರತವಳ್ಳಿ ಗ್ರಾಮ ಪಂಚಾಯಿತಿ ರಾಷ್ಟ್ರಿಯ ಹೆದ್ದಾರಿ ಮಾವನೂರು ಕೂಡಿಗೆಯಿಂದ ಅಗಸರಹಟ್ಟಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಹತ್ತಿಗಿಡ ಓಣಿ ರಸ್ತೆಯನ್ನು ತಹಸೀಲ್ದಾರ್ ಎಚ್.ಮಲ್ಲಿಕಾರ್ಜುನ ಅವರು ತೆರವುಗೊಳಿಸಿದರು.

ಮಾವನೂರಿನಿಂದ ಅಗಸರಹಟ್ಟಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸ. ನಂ. 25 ರಲ್ಲಿರುವ ಹತ್ತಿಗಿಡ ಓಣಿ ರಸ್ತೆ ಜಾಗವನ್ನು ಕೆಲ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವುದರಿಂದ ವಾಹನಗಳು, ಜಾನುವಾರುಗಳು ಹಾಗೂ ಜನ ಸಾಮಾನ್ಯರು ಓಡಾಡದಂತೆ ಕಿರುಕುಳ ನೀಡುತ್ತಿದ್ದಾರೆ. ತಹಸೀಲ್ದಾರ್ ಅವರಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರು ಯಾವುದೆ ಪ್ರಯೋಜನವಾಗಿಲ್ಲ, ಹತ್ತಾರು ಬಾರಿ ಕಚೇರಿಗೆ ಅಲೆದು ಬೇಸತ್ತು ನಾವು ಪ್ರತಿಭಟನೆಯ ದಾರಿ ಹಿಡಿದಿದ್ದೇವೆ ಎಂದು ಪ್ರತಿಭಟನಾಕಾರರು ಮತ್ತು ಗ್ರಾಮಸ್ಥರು ಶುಕ್ರವಾರ ಆರೋಪಿಸಿದ್ದರು.

ಕೂಡಲೇ ಕಾರ್ಯಪ್ರವೃತ್ತರಾದ ತಹಸೀಲ್ದಾರರು ತಾಲ್ಲೂಕು ಮೋಜಿಣಿದಾರ ಕುಮಾರ್, ಗ್ರಾಮ ಆಡಳಿತ ಅಧಿಕಾರಿ ಸಂಜೀವ ಚವ್ಹಾಣ್ ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ತೆರಳಿ ರಸ್ತೆ ಒತ್ತುವರಿ ಮಾಡಿರುವುದನ್ನು ತೆರವುಗೊಳಿಸಿದರು. ಪುನ: ಒತ್ತುವರಿ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ಮೊದಲು ಈ ರಸ್ತೆಯಲ್ಲಿ ಕನಿಷ್ಠ ಒಂದು ಆಟೋ ಸಂಚರಿಸಲು ಸಾಧ್ಯವಾಗುತ್ತಿರಲಿಲ್ಲ. ತೆರವುಗೊಳಿಸಿದ ನಂತರ ಎಲ್ಲ ವಾಹನಗಳು, ಜನಸಾಮಾನ್ಯರು, ಜಾನುವಾರುಗಳು ಸಂಚರಿಸಲು ಯೋಗ್ಯವಾಗಿದೆ. ತಹಸೀಲ್ದಾರ್ ರವರ ಕ್ರಮಕ್ಕೆ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಹಾಗೂ ಗ್ರಾಮಸ್ಥರಾದ ಉದಯರವಿ ಮತ್ತು ಸಾರ್ವಜನಿಕರು ಸ್ಥಳದಲ್ಲಿ ಹಾಜರಿದ್ದರು.

## ಬಿಜೆಪಿ ರಾಜ್ಯಾಧ್ಯಕ್ಷರಾಗಿ ಪಕ್ಷ ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು: ಶಾಸಕ ಸಿಮೆಂಟ್ ಮಂಜು

# ಸ್ವಂತ ಆಸ್ತಿ ಮಾರಾಟ ಮಾಡಿ ಪಕ್ಷ ಸಂಘಟಿಸಿದ್ದ ಬಿ.ಬಿ.ಶಿವಪ್ಪ

• ಪ್ರಜೋದಯ ವರದಿ

**ಸಕಲೇಶಪುರ:** ಬಿ.ಜೆ.ಪಿ. ಮಾಜಿ ರಾಜ್ಯಾಧ್ಯಕ್ಷ ಹಾಗೂ ಮಾಜಿ ಶಾಸಕ ಬಿ.ಬಿ. ಶಿವಪ್ಪ ಅವರು ತಮ್ಮ ಸ್ವಂತ ಆಸ್ತಿಯನ್ನು ಮಾರಾಟ ಮಾಡಿ ಪಕ್ಷ ಸಂಘಟನೆಗೆ ಸಮರ್ಪಿಸಿದ ಅಪರೂಪದ ನಾಯಕರಾಗಿದ್ದರು ಎಂದು ಶಾಸಕ ಸಿಮೆಂಟ್ ಮಂಜು ಅವರು ಸ್ಮರಿಸಿದರು.



ಯಸಳೂರಿನ ನಂದೀಶ್ವರ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಾರ್ಟಿ ಸಕಲೇಶಪುರ ಮಂಡಲದ ವತಿಯಿಂದ ಆಯೋಜಿಸಿದ್ದ ಬಿ.ಬಿ. ಶಿವಪ್ಪ ಅವರ 9ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿ ಬಿ.ಬಿ.ಶಿವಪ್ಪ ಅವರು ಎರಡು ಬಾರಿ ಸಕಲೇಶಪುರ ಕ್ಷೇತ್ರದ ಶಾಸಕರಾಗಿ ಸೇವೆ ಸಲ್ಲಿಸಿದ್ದು ಮಾತ್ರವಲ್ಲದೆ, ಬಿಜೆಪಿ ರಾಜ್ಯಾಧ್ಯಕ್ಷರಾಗಿ ಪಕ್ಷವನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು ಎಂದು ಅವರು ಹೇಳಿದರು.

ಬಿಜೆಪಿ ಸಂಘಟನೆ ಆರಂಭಿಕ ಹಂತದಲ್ಲಿದ್ದ ಸಂದರ್ಭದಲ್ಲಿ ಪಕ್ಷದ ಜವಾಬ್ದಾರಿ ಹೊರುವವರೇ ವಿರಳರಾಗಿದ್ದರು. ಅಂತಹ ಸಂದರ್ಭದಲ್ಲಿ ತಮ್ಮ ಸ್ವಂತ ದುಡಿಮೆಯ ಹಣವನ್ನು ಪಕ್ಷಕ್ಕಾಗಿ ವಿನಿಯೋಗಿಸಿದ ಅವರು, ತಮ್ಮ ತೋಟ ಹಾಗೂ ಕಾಫಿ ಬೆಳೆ ಮಾರಾಟ ಮಾಡಿ ಪಕ್ಷ ಸಂಘಟನೆಗೆ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ರಾಜ್ಯದಲ್ಲಿ ಪಕ್ಷದ ಬೆಳವಣಿಗೆಗೆ ಇಂತಹ ತ್ಯಾಗಮಯ ನಾಯಕರು ನೀಡಿದ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು.

ಇಂದಿಗೂ ಪಕ್ಷದ ಸಭೆಗಳು ಹಾಗೂ ಕಾರ್ಯಕಾರಿಣಿ ಸಭೆಗಳಲ್ಲಿ ಬಿ.ಬಿ. ಶಿವಪ್ಪ ಅವರ ಹೆಸರನ್ನು ಗೌರವದಿಂದ ಸ್ಮರಿಸಲಾಗುತ್ತದೆ. ಇತ್ತೀಚಿನ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿಯೂ ಮಾಜಿ ರಾಜ್ಯಾಧ್ಯಕ್ಷರಾಗಿ ಅವರ ಭಾವಚಿತ್ರವನ್ನು ಪ್ರದರ್ಶಿಸಿ ಗೌರವ ಸಲ್ಲಿಸಿರುವುದು ಪಕ್ಷ ತನ್ನ ಇತಿಹಾಸವನ್ನು ಗೌರವಿಸುವುದಕ್ಕೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಇತಿಹಾಸವನ್ನು ಅರಿಯದವರು ಇತಿಹಾಸವನ್ನು ಸೃಷ್ಟಿಸಲಾರರು ಎಂಬ ಮಾತನ್ನು ಉಲ್ಲೇಖಿಸಿದ ಅವರು, ಇಂದು ಬಿಜೆಪಿ ದೇಶದ ಪ್ರಮುಖ ರಾಜಕೀಯ ಶಕ್ತಿಯಾಗಿ ಬೆಳೆದಿರುವುದರ ಹಿಂದೆ ಬಿ.ಬಿ.ಶಿವಪ್ಪ ಅವರಂತಹ ತ್ಯಾಗಮಯ ನಾಯಕರ ಪರಿಶ್ರಮವಿದೆ ಎಂದು ಹೇಳಿದರಲ್ಲದೆ, ನರೇಂದ್ರ ಮೋದಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ಅವರಂತಹ ನಾಯಕರನ್ನು ದೇಶಕ್ಕೆ ನೀಡಿರುವ ಬಿಜೆಪಿ ಬೆಳವಣಿಗೆಯಲ್ಲಿ ಶಿವಪ್ಪ ಅವರ ಕೊಡುಗೆ ಸ್ಮರಣೀಯವಾಗಿದೆ ಎಂದರು.

ಬಿ.ಬಿ.ಶಿವಪ್ಪ ಅವರ ಸರಳತೆ ಮತ್ತು ಮಾನವೀಯ ಗುಣಗಳನ್ನು ಸ್ಮರಿಸಿದ ಶಾಸಕ ಮಂಜು, ಅವರು ಯಾವುದೇ ವ್ಯಕ್ತಿಯನ್ನು ಅವಹೇಳನ ಮಾಡದೆ ಎಲ್ಲರನ್ನೂ ಸಮಾನ ಗೌರವದಿಂದ ಕಾಣುತ್ತಿದ್ದರು. ಅವರ ವ್ಯಕ್ತಿತ್ವವೇ ಇಂದಿಗೂ ಜನಮನದಲ್ಲಿ ಅವರನ್ನು ಜೀವಂತವಾಗಿರಿಸಿದೆ ಎಂದು ಹೇಳಿದರು.

ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜುನಾಥ್ ಅವರು ಮಾತನಾಡಿ, ಬಿ.ಬಿ.ಶಿವಪ್ಪ ಅವರ ಮೊದಲ ಚುನಾವಣೆಯಿಂದಲೇ ಅವರ ಪರವಾಗಿ ಪ್ರಚಾರ ನಡೆಸಿದ್ದೆ. ನನ್ನ ರಾಜಕೀಯ ಬೆಳವಣಿಗೆಯಲ್ಲಿ ಶಿವಪ್ಪ ಹಾಗೂ ಸುಶೀಲಮ್ಮ ಅವರ ಮಾರ್ಗದರ್ಶನ ಮತ್ತು ಪ್ರೋತ್ಸಾಹ ಮಹತ್ವದ ಪಾತ್ರ ವಹಿಸಿದೆ. ಪಕ್ಷಕ್ಕೆ ನಿಷ್ಠೆಯಿಂದ ಕೆಲಸ ಮಾಡುವ ಮೌಲ್ಯವನ್ನು ಅವರು ಕಲಿಸಿಕೊಟ್ಟಿದ್ದು, ಮಹಿಳಾ ಮೋರ್ಚಾವನ್ನು ಇನ್ನಷ್ಟು ಬಲಪಡಿಸುವ ಮೂಲಕ ಅವರ ಆದರ್ಶಗಳನ್ನು ಮುಂದುವರಿಸುತ್ತೇನೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಾದ ಬಿ.ಟಿ. ಮಹೇಶ್, ಮಹೇಶ್ ಹಾಗೂ ರೇಣುಕಾ ಅವರನ್ನು ಸನ್ಮಾನಿಸಲಾಯಿತು.

ಬಿ.ಜೆ.ಪಿ. ಮಂಡಲ ಅಧ್ಯಕ್ಷ ವಳಲಹಳ್ಳಿ ಅಶ್ವತ್, ಮುಖಂಡರಾದ ಜೈ ಮಾರುತಿ ದೇವರಾಜ್, ಜಯಪ್ರಕಾಶ್ ದೊಡ್ಡದಿಣ್ಣೆ, ಪ್ರತಾಪ್, ಪವಿತ್ರ ಮಂಜುನಾಥ್, ಸವಿನ್‌ಗೌಡ, ಬ್ಯಾಕರವಳ್ಳಿ ಜಯಣ್ಣ, ಕಿತ್ತಗಳಲೆ ಉದಯಕುಮಾರ್, ಲೋಕೇಶ್ ಗೌಡ, ಮಂಡಲ ಪ್ರಧಾನ ಕಾರ್ಯದರ್ಶಿ ಮೋಹನ್ ಸೇರಿದಂತೆ ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಮತ್ತಿತರರು ಉಪಸ್ಥಿತರಿದ್ದರು.


ಅರಕಲಗೂಡು ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ಘನ ನ್ಯಾಯಾಲಯದಲ್ಲಿ
ಸಿಆರ್.ಮಿಸ್. 729/2026
ಅರ್ಜಿದಾರರು :
ವಿಜಯ ಕೋಂ ಮಲ್ಲಿಕಾರ್ಜುನ ಸುಮಾರು 54 ವರ್ಷ, ಬೆಸೂರು ಗ್ರಾಮ, ಕೊಡ್ಲಿಪೇಟೆ ಹೋಬಳಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.
ವಿರುದ್ಧ:
ರೆಸ್ಪಾಂಡೆಂಟರು: ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು. ಅರಕಲಗೂಡು ತಾಲ್ಲೂಕು.
ಪತ್ರಿಕಾ ಪ್ರಕಟಣೆ
ಮೇಲ್ಕಂಡ ಅರ್ಜಿಯ ಅರ್ಜಿದಾರರ ತಾಯಿಯಾದ ರತ್ನಮ್ಮ ಕೋಂ ನಂಜಪ್ಪ ರವರು ದಿನಾಂಕ:11-12-2017 ರಂದು ಅರಕಲಗೂಡು ತಾಲ್ಲೂಕು, ಮಲ್ಲಿಪಟ್ಟಣ ಹೋಬಳಿ, ಲಿಂಗದಹಳ್ಳಿ ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಡೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 09-09-2026 ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026ನೇ ವರ್ಷದ ಜುಲೈ ತಿಂಗಳ 25ದಿನಾಂಕದಂದು ಇದನ್ನು ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ವಕೀಲರು, ಅರಕಲಗೂಡು ದಿನಾಂಕ: 25-07-2026
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಗೌರವಾನ್ವಿತ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿರವರ ಘನನ್ಯಾಯಾಲಯ ಅರಕಲಗೂಡು

ಅರಕಲಗೂಡು ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿರವರ ಘನನ್ಯಾಯಾಲಯದಲ್ಲಿ
ಸಿಆರ್.ಮಿಸ್. 731/2026
ಅರ್ಜಿದಾರರು :
1. ಪುಟ್ಟರಾಜು ಬಿನ್ ಲೇಟ್ ಜವರೇಗೌಡ ಸುಮಾರು 56 ವರ್ಷ,
2. ಗೌರಮ್ಮ ಕೋಂ ಲೇಟ್ ಕೇಶವೇಗೌಡ, ಬಿನ್ ಲೇಟ್ ಜವರೇಗೌಡ ಸುಮಾರು 60 ವರ್ಷ,
3. ಚಂದ್ರೇಗೌಡ ಬಿನ್ ಲೇಟ್ ಜವರೇಗೌಡ, ಸುಮಾರು 58 ವರ್ಷ, ಎಲ್ಲರೂ ಚಿಕ್ಕಬೊಮ್ಮನಹಳ್ಳಿ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
ವಿರುದ್ಧ:
ಎದುರುಅರ್ಜಿದಾರರು :ತಹಸೀಲ್ದಾರ್ ರವರು, ಜನನ-ಮರಣ ನೋಂದಾಣಾಧಿಕಾರಿಗಳು ಅರಕಲಗೂಡು, ಅರಕಲಗೂಡು ತಾಲ್ಲೂಕು,ಹಾಸನ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಅರ್ಜಿದಾರರ ತಂದೆಯವರಾದ ಜವರೇಗೌಡ ಬಿನ್ ಲೇಟ್ ಬೆಟ್ಟೇಗೌಡರವರು ದಿನಾಂಕ: 08/10/1975 ರಂದು ಹಾಸನ ಜಿಲ್ಲೆ. ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಚಿಕ್ಕಬೊಮ್ಮನಹಳ್ಳಿ ಗ್ರಾಮದಲ್ಲಿ ಮೃತರಾಗಿರುತ್ತಾರೆ. ಸದರಿರವರು ಮೃತರಾಗಿರುವ ಬಗ್ಗೆ ಮರಣ ದೃಢೀಕರಣ ಪತ್ರವನ್ನು ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಮೃತರಾದ ಬಗ್ಗೆ ಮೇಲ್ಕಂಡ ಅರ್ಜಿಯಲ್ಲಿ ಹಿತಾಸಕ್ತಿ ಉಳ್ಳವರು ಯಾರಾದರು ಇದ್ದಲ್ಲಿ ಘನ ನ್ಯಾಯಾಲಯಕ್ಕೆ ದಿನಾಂಕ: 29-09-2026ರ ಬೆಳಿಗ್ಗೆ 11-00 ಗಂಟೆಗೆ ನೀವಾಗಲಿ ಅಥವಾ ನಿಮ್ಮ ಪರವಾಗಿ ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗ ತಕ್ಕದ್ದು. ತಪ್ಪಿದ್ದಲ್ಲಿ ಈ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.2026ನೇ ವರ್ಷದ ಜುಲೈ ತಿಂಗಳ 25ದಿನಾಂಕದಂದು ಇದನ್ನು ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ವಕೀಲರು, ಅರಕಲಗೂಡು ದಿನಾಂಕ: 25-07-2026
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿರವರ ಘನನ್ಯಾಯಾಲಯ ಅರಕಲಗೂಡು

ಅರಕಲಗೂಡು ಗೌರವಾನ್ವಿತ 1ನೇ ಅಧಿಕ ಸಿವಿಲ್ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ ರವರ ನ್ಯಾಯಾಲಯದಲ್ಲಿ
ಸಿಆರ್.ಮಿಸ್. 609/2026
ಅರ್ಜಿದಾರರು :
1) ಯಶೋಧಮ್ಮ ಕೋಂ ಲೇಟ್ ನಾರಾಯಣಯ್ಯ ಸುಮಾರು 72 ವರ್ಷ,
2) ಕೃಷ್ಣಮ್ಮ ಕೋಂ ರಾಮಕೃಷ್ಣಯ್ಯ ಸುಮಾರು 68 ವರ್ಷ, ಮುದ್ದನಹಳ್ಳಿ ಗ್ರಾಮ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
3) ರಾಮಸ್ವಾಮಯ್ಯ ಬಿನ್ ಲೇಟ್ ಪುಟ್ಟಸ್ವಾಮಯ್ಯ ಸುಮಾರು 67 ವರ್ಷ 1& 3ನೇ ಅರ್ಜಿದಾರರ
ವಿಳಾಸ:-
ಹರದೂರುಪುರ ಗ್ರಾಮ, ಕಸಬಾ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
ವಿರುದ್ಧ:
ಎದುರುಅರ್ಜಿದಾರರು : ತಹಸೀಲ್ದಾರ್‌ರವರು, ತಾಲ್ಲೂಕು ಕಛೇರಿ, ಅರಕಲಗೂಡು, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಅರ್ಜಿದಾರರುಗಳ ತಂದೆಯವರಾದ ಪುಟ್ಟಸ್ವಾಮಯ್ಯ ಬಿನ್ ರಂಗಯ್ಯ ರವರು ದಿನಾಂಕ: 10/08/1986 ರಂದು ಹಾಸನ ಜಿಲ್ಲೆ. ಅರಕಲಗೂಡು ತಾಲ್ಲೂಕು, ಕಸಬಾ ಹೋಬಳಿ, ಹರದೂರುಪುರ ಗ್ರಾಮದಲ್ಲಿ ಮೃತರಾಗಿರುತ್ತಾರೆ. ಸದರಿ ರವರು ಮೃತರಾಗಿರುವ ಬಗ್ಗೆ ಮರಣ ದೃಢೀಕರಣ ಪತ್ರವನ್ನು ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಮೃತರಾದ ಬಗ್ಗೆ ಮೇಲ್ಕಂಡ ಅರ್ಜಿಯಲ್ಲಿ ಹಿತಾಸಕ್ತಿ ಉಳ್ಳವರು ಯಾರಾದರು ಇದ್ದಲ್ಲಿ ಘನ ನ್ಯಾಯಾಲಯಕ್ಕೆ ದಿನಾಂಕ: 18/09/2026 ಬೆಳಿಗ್ಗೆ 11-00 ಗಂಟೆಗೆ ನೀವಾಗಲಿ ಅಥವಾ ನಿಮ್ಮ ಪರವಾಗಿ ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗ ತಕ್ಕದ್ದು. ತಪ್ಪಿದ್ದಲ್ಲಿ ಈ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ. 2026ನೇ ವರ್ಷದ ವರ್ಷದ ಜುಲೈ ತಿಂಗಳ 7 ದಿನಾಂಕದಂದು ಇದನ್ನು ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ಅರ್ಜಿದಾರರ ಪರ ವಕೀಲರು ( ರವಿಕುಮಾರ್ ಬಿ.ಎಸ್ ) ವಕೀಲರು,ಅರಕಲಗೂಡು
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಗೌರವಾನ್ವಿತ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿರವರ ನ್ಯಾಯಾಲಯ ಅರಕಲಗೂಡು

ಅರಕಲಗೂಡು ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿರವರ ಘನನ್ಯಾಯಾಲಯದಲ್ಲಿ
ಸಿಆರ್.ಮಿಸ್. 730/2026
ಅರ್ಜಿದಾರರು :
1. ಪುಟ್ಟರಾಜು ಬಿನ್ ಲೇಟ್ ಜವರೇಗೌಡ ಸುಮಾರು 56 ವರ್ಷ,
2. ಗೌರಮ್ಮ ಕೋಂ ಲೇಟ್ ಕೇಶವೇಗೌಡ, ಬಿನ್ ಲೇಟ್ ಜವರೇಗೌಡ ಸುಮಾರು 60 ವರ್ಷ,
3. ಚಂದ್ರೇಗೌಡ ಬಿನ್ ಲೇಟ್ ಜವರೇಗೌಡ, ಸುಮಾರು 58 ವರ್ಷ, ಎಲ್ಲರೂ ಚಿಕ್ಕಬೊಮ್ಮನಹಳ್ಳಿ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
ವಿರುದ್ಧ:
ಎದುರುಅರ್ಜಿದಾರರು :ತಹಸೀಲ್ದಾರ್ ರವರು, ಜನನ-ಮರಣ ನೋಂದಾಣಾಧಿಕಾರಿಗಳು ಅರಕಲಗೂಡು, ಅರಕಲಗೂಡು ತಾಲ್ಲೂಕು,ಹಾಸನ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಅರ್ಜಿದಾರರ ತಾಯಿಯವರಾದ ನಂಜಮ್ಮ @ ಅಕ್ಕಯ್ಯಮ್ಮ ಕೋಂ ಲೇಟ್ ಜವರೇಗೌಡರವರು ದಿನಾಂಕ:-04/02/2025ರಂದು ಹಾಸನ ಜಿಲ್ಲೆ. ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಚಿಕ್ಕಬೊಮ್ಮನಹಳ್ಳಿ ಗ್ರಾಮದಲ್ಲಿ ಮೃತರಾಗಿರುತ್ತಾರೆ. ಸದರಿ ರವರು ಮೃತರಾಗಿರುವ ಬಗ್ಗೆ ಮರಣ ದೃಢೀಕರಣ ಪತ್ರವನ್ನು ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಮೃತರಾದ ಬಗ್ಗೆ ಮೇಲ್ಕಂಡ ಅರ್ಜಿಯಲ್ಲಿ ಹಿತಾಸಕ್ತಿ ಉಳ್ಳವರು ಯಾರಾದರು ಇದ್ದಲ್ಲಿ ಘನ ನ್ಯಾಯಾಲಯಕ್ಕೆ ದಿನಾಂಕ:29/09/2026ರ ಬೆಳಿಗ್ಗೆ 11-00 ಗಂಟೆಗೆ ನೀವಾಗಲಿ ಅಥವಾ ನಿಮ್ಮ ಪರವಾಗಿ ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗ ತಕ್ಕದ್ದು. ತಪ್ಪಿದ್ದಲ್ಲಿ ಈ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.2026ನೇ ವರ್ಷದ ಜುಲೈ ತಿಂಗಳ 25ದಿನಾಂಕದಂದು ಇದನ್ನು ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ವಕೀಲರು, ಅರಕಲಗೂಡು ದಿನಾಂಕ: 25-07-2026
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿರವರ ಘನನ್ಯಾಯಾಲಯ ಅರಕಲಗೂಡು

